(ಶ್ರೀ ಎಸ್. ಗೋಪಾಲಗೌಡ)

ಅಮಲದಾರರಾಗಲಿ ಪರಿಶೀಲನೆ ಮಾಡಲು ಪ್ರಯತ್ನ ಪಟ್ಟಿದ್ದಾರೆಯೇ ಎಂಬುದನ್ನು ನೋಡಬೇಕು. ಪರಿಸ್ಥಿತಿ ಹೀಗಿರುವುದು ಅನುಚಿತ. ರೈತರನ್ನು ಹೊರಗೆ ಹಾಕದಂತೆ ಮಾಡುವುದಕ್ಕಾಗಿಯೇ ಈ ಕಾನೂನು ಇದೆ ಎಂಬ ಕಾರಣವನ್ನು ಹೇಳಿದರೆ ತಾಲ್ಲೂಕಿನಲ್ಲಿ ಅಮಲದಾರರೇ ಇಲ್ಲ. ಇಂಥ ಒಂದು ಪರಿಸ್ಥಿತಿ ಒಂದೆಡೆಯಾಗಿದೆ. ಒಬ್ಬ ಸಂಬಂಧಪಟ್ಟ ಅಮಲದಾರರು ವರ್ಗವಾಗಿ ಹೋಗಿದ್ದರೂ ಅವರ ಸ್ಥಳದಲ್ಲಿ ಮತ್ತೊಬ್ಬರು ಒಂದು ವರ್ಷವಾದರೂ ಬಂದಿಲ್ಲ.

The House adjourned at Three of the Clock for Lunch and reassembled at Half past Three of the Clock.

[MR. SPEAKER in the Chair.]

DISPOSAL OF QUESTIONS.

Mr. SPEAKER.—Before we resume discussion of the Bill, I would like to announce the position as regards questions. About 54 questions were pending at the close of the last session out of which 38 have been by now answered. Sixteen are still due. Now, the questions which have been tabled for the last Session are 287, of which 192 are pending. If 16 questions are added to this, we have to deal with 208 questions. The answers so far received are for 86 questions. These are with the office. Out of 86, 50 have already been replied to in this Session. There are only 36 questions to be answered. They are being printed in two lists, Nos. 4 and 5. The office is expecting that answers to the rest of the questions would be received as early as possible. There are many questions to which replies are yet to be received from the Government. The number is of the order of 208. I hope the Government would make all possible attempts to give replies to all these questions, so that we may be able to deal with them in this Session.

THE MYSORE TENANCY (AMENDMENT AND CONTINUANCE OF TENANCIES) BILL, 1957.

Motion to consider (contd.)

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಎಲ್ಲ ಕಡೆಗಳಲ್ಲಿಯೂ ಈ ಕಾಯಿದೆಯನ್ನು ಅನ್ವಯ ಮಾಡುವುದಕ್ಕಾಗಿ ಈ ಬಿಲ್ಲನ್ನು ತಂದಿದ್ದಾರೆ ಎಂದು ಹೇಳಿದರು. ಇಷ್ಟು ದಿವಸಗಳಿಂದ ಏಕೆ ಇದನ್ನು ಜಾರಿಗೆ ತರುವುದಕ್ಕಾಗಲಿಲ್ಲ ಎನ್ನುವ ಬಗ್ಗೆ ಅವರು ಜವಾಬುಕೊಡುವುದಕ್ಕೆ ಶಕ್ತರೂ ಆಗಿಲ್ಲ. ಈ ಮಸೂದೆಯಲ್ಲಿ ಮುಖ್ಯವಾಗಿ ಭೂಮಿ ಬಿಟ್ಟುಕೊಟ್ಟ ಮೇಲೆ ಅದನ್ನು ರಿಜಿಸ್ಟರು ಮಾಡಬೇಕು ಎನ್ನುವುದನ್ನು ಇಲ್ಲಿಯೂಕೂಡ ಸೇರಿಸಿದ್ದಾರೆ. ಈಗ ತಾನೇ ಪಾಸುಮಾಡಿದ ಬೊಂಬಾಯಿ ದುಪಡಿಯ ಮಸೂದೆಯಲ್ಲಿ ಬಿಟ್ಟುಕೊಡುವ ಭೂಮಿಯನ್ನು ರಿಜಿಸ್ಟರ್ ಮಾಡಬೇಕೆಂಬುದು ಸೇರಿದೆ. ಮೈಸೂರಿನಲ್ಲಿಯೂ ಕೂಡ ಆ ರೀತಿ ಬಿಟ್ಟುಕೊಟ್ಟು ಭೂಮಿಯನ್ನು ರಿಜಿಸ್ಟರ್ ಮಾಡಬೇಕೆಂದು ಒಂದು ಸೆಕ್ಷನ್ನನ್ನು ಹೊಸದಾಗಿ ಸೇರಿಸಿದ್ದಾರೆ. ಇದುವರೆಗೆ ಭೂಮಿಯನ್ನು ರೈತ ಬಿಟ್ಟುಕೊಟ್ಟ ಸಂದರ್ಭದಲ್ಲಿ ಅಂತಹ ಭೂಮಿ ರಿಜಿಸ್ಟರ್ ಆಗದೆ ಇರುತ್ತಿತ್ತು. ಈ ಹೊಸ ಸೆಕ್ಷನ್ನಿನಿಂದ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತಾಯಿತು. ನೋಡುವುದಕ್ಕೆ ಇದು ಬಹಳ ತೊಂದರೆಇಲ್ಲದೆ ಇರುವ ತಿದ್ದುಪಡಿ ಎಂದು ಕಾಣುತ್ತದೆ. ಇಪ್ಪತ್ತೊನ್ದಿವಸ ಜಮೀನುದಾರರು ಹೇಗಿದ್ದಾರೆಂದರೆ ಅವರಿಗೆ ಯಾವ ಕಾನೂನಿನ ಆಶ್ರಯವೂ ಬೇಡ. ದೇಶದಲ್ಲಿ ಯಾವ ರೀತಿ ಕಾಯಿದೆ ಇರಲಿ ಅದಕ್ಕೆ ವಿರೋಧವಾಗಿ ಅವರು ತಮ್ಮ ಮನಸ್ಸಿಗೆ ಬಂದಂತೆ ರೈತರಿಂದ ಬಿಟ್ಟಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಈಗಲೂ ಇದನ್ನು ನಾವೆಲ್ಲ ನೋಡುತ್ತಾ ಇದ್ದೇವೆ. ಇಪ್ಪತ್ತು ಕಾನೂನು ಏನೇ ಇರಲಿ ಜಮೀನುದಾರರು ಅವರ ಅನುಕೂಲಕ್ಕೆ ತಕ್ಕಂತೆ ಕಾನೂನಿಗೆ ವಿರೋಧವಾಗಿ ಹೋಗುವುದಕ್ಕೆ ಸಾಧ್ಯವಾಗಿದೆ. ನಾನು ಮೊದಲೇ ಹೇಳಿದಹಾಗೆ ಈ ಐದುವರ್ಷಗಳ ಅವಧಿಯನ್ನು ಇಲ್ಲಿಯೂಕೂಡ, ಎಂದರೆ ಹಳೆಯ ಮೈಸೂರು ರಾಜ್ಯದಲ್ಲಿ ಬೇರೆಕಡೆ ಇದ್ದಂತೆ ಗೇಣಿ ಶಾಸನವನ್ನು ಜಾರಿಗೆ ಕೊಡತಕ್ಕ ವಿಷಯದಲ್ಲಿ ಯಾವ ಪ್ರಯತ್ನವನ್ನೂ ಮೈಸೂರು ಸರ್ಕಾರ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದರಿಂದ ಜನಗಳ ವಿಶ್ವಾಸವನ್ನು ಮೈಸೂರು ಸರ್ಕಾರ ಕಳೆದುಕೊಂಡಿದೆ. ಈ ಕಾನೂನಿನ ತಿದ್ದುಪಡಿಯಾಗಬೇಕು. 1957ನೇ ಇಸವಿಗೆ ಐದುವರ್ಷದ ಅವಧಿ ಮುಗಿದುಹೋಗುತ್ತದೆ. ಅಷ್ಟರೊಳಗಾಗಿ ಸಾಕಷ್ಟು ರಕ್ಷಣೆಯನ್ನು ಕೊಡುವಂತೆ ಅನೇಕ ಸಂದರ್ಭಗಳಲ್ಲಿ ನಾವು ಒತ್ತಾಯ ಮಾಡಬೇಕಾಗಿ ಬಂದಿತು. ಆದಾಗ್ಯೂ ಮೈಸೂರು ಸರ್ಕಾರವು ಈ ವಿಷಯದ ಬಗ್ಗೆ ಇದುವರೆಗೆ ಯಾವುದೇ ತರಹದ ಗಮನವನ್ನೂ ಕೂಡ ಕೊಟ್ಟಿಲ್ಲ. ಈ ಮೊದಲೇ ಹೇಳಿದಹಾಗೆ ಈ ಮಸೂದೆಯನ್ನು ಸಮಗ್ರವಾಗಿ ತಿದ್ದುಪಡಿಮಾಡಿ ಈ ಮಾನ್ಯ ಸಭೆಯಮುಂದೆ ಮುಂಡಿಸಬೇಕೆಂದು ಹಿಂದೆಯೇ ಹೇಳಿ ನಾನೇ ಒಂದು ಮಸೂದೆಯನ್ನೂ ಕೂಡ ಮುಂಡಿಸಿದ್ದೆ. ರೈತರಿಗೆ ಸಹಾಯ ಮಾಡುತ್ತೇವೆ, ಅನುಕೂಲ ಮಾಡುವ ಆಸಕ್ತಿ ಇದೆ ಎಂದು ಹೇಳಿದ ಕಾಂಗ್ರೆಸ್ ಪಕ್ಷದ ಸದಸ್ಯರೇ ಈ ಮಸೂದೆ ಕಾನೂನು ಆಗದೆ ಇರುವುದಕ್ಕೆ ಏನೇನು ಮಾಡಬೇಕೋ ಅಷ್ಟನ್ನೂ ಮಾಡಿ ಈ ಮಸೂದೆ ಕಾನೂನು ಆಗುವುದಕ್ಕೆ ಅವಕಾಶ ಕೊಡಲಿಲ್ಲ. ಕೊನೆಯ ಗಳಿಗೆಯಲ್ಲಿ ಈ ರೀತಿಯ ಆರ್ಡಿನೆನ್ಸುಗಳು ಬಂದವು. ಈ ನಾಲ್ಕು ಆರ್ಡಿನೆನ್ಸುಗಳನ್ನು ಹೊರಡಿಸುವ ಸಂದರ್ಭದಲ್ಲೆಲ್ಲ ಮಾನ್ಯ ಸಚಿವರು ಹೊಸದಾಗಿ ಮೈಸೂರಿನ ನಿರ್ಮಾಣವಾಗುವ ಸಂದರ್ಭದಲ್ಲಿ ಎಲ್ಲ ಭಾಗದ ಕಾನೂನುಗಳನ್ನೆಲ್ಲ ಒಂದುಗೂಡಿಸಿ ಸಮಗ್ರವಾದ ಕಾನೂನನ್ನಾಗಿ ಮಾಡಬೇಕೆಂದೂ ಅವಧಿ ಮುಗಿದುಹೋಗತಕ್ಕ ಕಾನೂನುಗಳಿಗೆ ಪುನಃ ಜೀವ ಕೊಟ್ಟು, ಅವನ್ನು ಮುಂದುವರಿಸಿಕೊಂಡು ಹೋಗಲು ಮತ್ತು

ಸ್ಟೇಟಸ್ಕೋವನ್ನು ಮೇಂಟೇನ್ ಮಾಡಲು ಈ ಕಾನೂನನ್ನು ತರಬೇಕಾಗಿ ಬಂದಿದೆ ಎಂದೂ ಹೇಳಿದರು.

ಶ್ರೀ ಕೆ. ಪಟ್ಟಾಭಿರಾಮ್ಅವರು ಹೇಳಿದ ಹಾಗೆ, *status quo* ಮುಂದುವರಿಸಿಕೊಂಡು ಹೋಗುವುದೆಂದರೆ ಮುಂಬ್ಯೆನಲ್ಲಿ ಈಗ ಏನು ಪರಿಸ್ಥಿತಿ ಇದೆಯೋ, ಯಾವ ಕಾನೂನು ಕಾಯಿದೆಗಳು ಅನ್ವಯವಾಗುತ್ತಿದ್ದಲ್ಲಿವೆಯೋ, ಅವುಗಳನ್ನು ಮುಂದುವರಿಸಿಕೊಂಡು ಹೋಗುವುದು ಎಂದು ಅರ್ಥವಾಗುತ್ತದೆ. ಅಲ್ಲಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು *status quo* ಎಂಬುದಕ್ಕೆ ಬೇರೆ interpretation ಮಾಡಿದರು. ಅಲ್ಲಿ ಬಹು ಮುಖ್ಯವಾದ ವಿಧಿಗಳನ್ನು ಹತ್ತಿಕ್ಕಿ ಅವುಗಳನ್ನು ಕೊಲ್ಲುವುದಕ್ಕೆ ಏನೇನು ಬೇಕೋ ಅದನ್ನು ಮಾಡಿದರು. ಈಗ ಮೈಸೂರಿಗೆ ಸಂಬಂಧಪಟ್ಟಹಾಗೆ ಬೇರೆ ಒಂದು ಸವಲತ್ತನ್ನು ಒದಗಿಸಿಕೊಡಲು ಈ ಮಸೂದೆಯನ್ನು ತಂದಿದ್ದೇವೆಂದು ಮಾನ್ಯ ಮಂತ್ರಿಗಳು ಪದೇ ಪದೇ ಹೇಳುತ್ತಾರೆ. ಒಂದು ಸಮಿತಿಯನ್ನು ರಚಿಸುವುದು ಅವಶ್ಯ ಎಂದು ಹೇಳಿದ್ದಾರೆ. ಬಹುಶಃ ಇದನ್ನು ಕಮಿಟಿಗೆ ಹಾಕಬಹುದು. ಹಿಂದಿನ ಮೈಸೂರಿನ ಗೇಣಿ ಮಸೂದೆಯ ಬಗ್ಗೆ ಈಗ ವಿಶಾಲವಾದಂಥ ಮೈಸೂರು ಸರಕಾರ ಪುನಃ ಯೋಚಿಸಬೇಕಾದ ಸಂದರ್ಭಬಂದಿದೆ. ಮಾನ್ಯ ಮಂತ್ರಿಗಳು ಮಾತನಾಡುತ್ತ "ಕಮಿಟಿಗೆ ಹೋಗುವುದರಲ್ಲಿ ಏನು ಅರ್ಥವಿದೆ? ವ್ಯರ್ಥ ಕಾಲಹರಣವಾಗುತ್ತದೆ ಎಂದು ಗೋಪಾಲಗೌಡರು ಹೇಳುತ್ತಾರೆ" ಎಂದು ಹೇಳಿದರು. ಮತ್ತು ಸಮಿತಿಯನ್ನು ಮಾಡಬೇಕಾದ ಅವಶ್ಯಕತೆ ಇದ್ದೇ ಇದೆ ಎಂದು ಅವರು ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಂಡರು. ಯಾವುದೇ ಒಂದು ವಿಷಯ ಈ ಸಭೆಯಲ್ಲಿ ಚರ್ಚೆಯಾದ ಮೇಲೆ, ಇಲ್ಲಿ ಪೂರ್ತಿ ವಿಷಯ ಬಗೆ ಹರಿಯದೆ ಹೋದರೆ ಅಥವಾ ಯಾವುದೇ ವಿಷಯದ ಮೇಲೆ ಹೆಚ್ಚಿನ ಚರ್ಚೆ ಅವಶ್ಯಕವೆನಿಸಿದಲ್ಲಿ ಮಾತ್ರ ಸೆಲೆಕ್ಟ್ ಕಮಿಟಿಗಳನ್ನಾಗಲೀ, ಬೇರೆ ಕಮಿಟಿಗಳನ್ನಾಗಲೀ ರಚನೆ ಮಾಡಿ, ಅಲ್ಲಿ ಈ ಚರ್ಚೆಯನ್ನು ಮುಂದುವರಿಸಲಾಗುತ್ತದೆ. ಆ ಮಸೂದೆಗಳು ಪುನಃ ಈ ಸಭೆಯ ಮುಂದೆ ಬಂದು ಕಾನೂನಾಗುತ್ತವೆ. ಅದರ ಬಗ್ಗೆ ನನಗೆ ಸಾಕಷ್ಟು ಅನುಭವವಿದೆ. ಆದರೆ ನಾನುಹೇಳುವುದು ಈ ಗೇಣಿ ಕಾನೂನಿನ ಬಗ್ಗೆ ಕಳೆದ ಹತ್ತು ವರ್ಷಗಳಿಂದ ಮತ್ತು ಅದಕ್ಕೂ ಹಿಂದಿನಿಂದ ಈ ದೇಶದಲ್ಲಿ ಚರ್ಚೆಯಾಗುತ್ತಿತ್ತು. ಸಾಮಾನ್ಯವಾಗಿ ಎಲ್ಲ ರಾಜಕೀಯ ಪಕ್ಷಗಳೂ ಈಗಾಗಲೇ ಒಂದು ನಿರ್ಧಾರಕ್ಕೆ ಬಂದಿವೆ. ಕಾಂಗ್ರೆಸ್ ಪಕ್ಷವೂ ಕೂಡ land to the tiller ಎಂಬುದನ್ನು ತನ್ನ ಯೋಜನಾ ಕಮಿಷನ್ ಪುಸ್ತಕದಲ್ಲಿ ಸೇರಿಸಿಕೊಂಡಿದೆ. ಬಹುಶಃ ಚುನಾವಣೆ ಪ್ರಣಾಳಿಕೆಯಲ್ಲಿಯೂಸೇರಿಸಿಕೊಂಡಿರಬಹುದು ಎಂದು ಕಾಣುತ್ತದೆ. ಮೊದಲು ತನ್ನ ಧ್ಯೇಯ ಅಥವಾ ಒಂದು ತತ್ತ್ವದ ಬಗ್ಗೆ ತನ್ನ ಧೋರಣೆ ಏನು ಎನ್ನುವುದು ತೀರ್ಮಾನವಾದ ಮೇಲೆ ಉಳಿದ ವಿವರಗಳ ಬಗ್ಗೆ ನಮಗೆ ಸಾಕಾದಷ್ಟು ಪುರಾವೆಗಳಿವೆ; ನಮಗೆ ಇಲ್ಲಿ ಸಾಕಷ್ಟು ಅಂಕಿ ಸಂಖ್ಯೆಗಳು ಒದಗುತ್ತಿವೆ ಎಂದು ಹೇಳುತ್ತೇನೆ. ಇದ್ದದ್ದು ಸಾಕು. ಇನ್ನೂ ಬೇಕಾದರೆ ಪಡೆಯುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ಈ ನೆಪಗಳನ್ನೂ ಕೊಡತಕ್ಕದ್ದು ಜವಾಬ್ದಾರಿಯನ್ನು ಹೊತ್ತಿರತಕ್ಕವರಿಗೆ ಉಚಿತವೆನಿಸಲಾರದು. ಯಾವುದಾದರೂ ಒಂದು ನೆಪವನ್ನು ಮುಂದೊಡ್ಡಿ ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳಬಾರದು. ಹೇಳುವುದೊಂದು ಆಚರಣೆ ಮಾಡುವುದು ಮತ್ತೊಂದು ಹೀಗಾಗಿದೆ. ನೀವು ಹೇಳುವುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ ಎಂದು ನಾನು ಹೇಳುವುದೂ ಅದೇ ವಿಷಯದಲ್ಲಿ. ಆದರೆ ನನಗೆ ಶ್ರೀಮಾನ್ ಪಾಟೀಲರ ಮೇಲೆ ವೈಯಕ್ತಿಕವಾಗಿ ಯಾವ ದ್ವೇಷ ಅಥವಾ ಆರೋಪಣೆ ಮಾಡಬೇಕೆಂಬ ಅಭಿಪ್ರಾಯವಿಲ್ಲ. ವೈಯಕ್ತಿಕವಾದ ವಿವರಗಳು ಇದುವರೆಗೂ ನನಗೆ ಗೊತ್ತಿಲ್ಲ. ಆದುದರಿಂದ ಅವರು ಏನು ಹೇಳುತ್ತಾರೆಯೋ ಅದನ್ನು ಮೈಸೂರು ಸರಕಾರ ಹೇಳುತ್ತದೆಂದು ನಾನು ಭಾವಿಸುತ್ತೇನೆ. ಅವರ ಅಭಿಪ್ರಾಯ ಮೈಸೂರು ಸರಕಾರದ ಅಭಿಪ್ರಾಯವೆಂದು ನಾನು ಹೇಳುತ್ತೇನೆ. ನಾನು ಶ್ರೀಮಾನ್ ಪಾಟೀಲರ ವಿರುದ್ಧ ಮಾತನಾಡಿದರೆ ಅದು ಮೈಸೂರು ಸರಕಾರದ ವಿರುದ್ಧ ಹೇಳಿದುದು ಎಂದು ಭಾವಿಸಬೇಕೇಹೊರತು ಅವರನ್ನು ಕುರಿತೇ ನೇರವಾಗಿಹೇಳುತ್ತೇನೆ ಎಂದು ಸರ್ವಥಾ ಭಾವಿಸಬಾರದು. ಇವರು ಯಾವ ರೀತಿಯಲ್ಲಿ ತಮ್ಮ ಸರಕಾರದ ಅಭಿಮತವನ್ನು ನಾಲ್ಕು ತಿಂಗಳ ಹಿಂದೆ ಸ್ಪಷ್ಟಪಡಿಸಿದ್ದೆ ಎಂದು ಈ ಮಾನ್ಯ ಸಭೆಯ ಮುಂದೆ ಹೇಳಿದರೋ ಆದೇ ರೀತಿ ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ ಕೆಲಸವೇ ಗಂಜೆಗಗಳಲ್ಲಿ ನಾನೂ ಕೂಡ ರೈತರ ಅಭಿಪ್ರಾಯಗಳನ್ನು ಅವರ ಪ್ರತಿನಿಧಿಯಾಗಿ ಸ್ಪಷ್ಟಪಡಿಸಿದ್ದೇನೆ. ಅದರಲ್ಲಿ "ಸರ್ಕಾರ ಈ ರೀತಿ ಪ್ರಯತ್ನ ಪಡುವುದಾದರೆ, ಅವರ ಈ ಪ್ರಯತ್ನವನ್ನು ವಿಫಲ ಗೊಳಿಸುವುದಕ್ಕೆ ನಾವೂ ಪ್ರಯತ್ನ ಪಡಬೇಕಾಗುತ್ತದೆ. ಈ ರೀತಿ ಮಾಡುವುದು ಸರ್ವಥಾ ನ್ಯಾಯವಾದದ್ದಲ್ಲ, ಇಂಥ ಪ್ರಯತ್ನವನ್ನು ಕೈ ಬಿಡಬೇಕು, ಇದರಿಂದ ರೈತರಿಗೆ ಹೆಚ್ಚಿನ ಅನನುಕೂಲವುಂಟಾಗುತ್ತದೆ. ಅವರ ಪ್ರಗತಿಗೆ ತೊಂದರೆ ತಂದಂತಾಗುತ್ತದೆ.' ಎಂದು ಹೇಳಿದ್ದೇನೆ. ಅವರ ಹೇಳಿಕೆ ಅನೇಕ ಪತ್ರಿಕೆಗಳಲ್ಲಿ ಬಂದ ಹಾಗೆ ನನ್ನ ಹೇಳಿಕೆ ಕೆಲವು ಪತ್ರಿಕೆಗಳಲ್ಲಿ ಬಂದಿದೆ. ಶ್ರೀಮಾನ್ ಪಾಟೀಲರು ಅದನ್ನೂ ನೋಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ವೈಯಕ್ತಿಕ ವಿಷಯವೇನೂ ಇಲ್ಲ. ಇದು ದೇಶಕ್ಕೆ ಸಂಬಂಧಪಟ್ಟ ವಿಷಯ ಮತ್ತು ಕೋಟ್ಯನುಕೋಟಿ ರೈತರಿಗೆ ಸಂಬಂಧಪಟ್ಟ ವಿಷಯ. ಕಾಂಗ್ರೆಸ್ ಪಕ್ಷತಮ್ಮ ಧ್ಯೇಯ ಧೋರಣೆಗಳ ಬಗ್ಗೆ ಸಮರ್ಥನೆ ಮಾಡಿಕೊಳ್ಳುವ ಹಾಗೆ ರೈತರೂ ಕೂಡ ತಮ್ಮ ಹಿತ ರಕ್ಷಣೆಗೆ ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳಬೇಕು ಮತ್ತು ತಮ್ಮ ಹಕ್ಕಿನ ಬಗ್ಗೆ ಹೋರಾಟ ಮಾಡಿಕೊಳ್ಳಲೇ ಬೇಕಾಗುತ್ತದೆ. ಇದು ಅನಿವಾರ್ಯ. ಇವೊತ್ತು ಮೈಸೂರಿನಲ್ಲಿ ಇಂಥ ಒಂದು ಅಸಮಾಧಾನ ಪರಿಸ್ಥಿತಿಯುಂಟಾಗಿದೆ ಎಂದು ಹೇಳುತ್ತೇನೆ.

ತಿದ್ದುಪಡಿಗಳನ್ನು ತರುವಾಗ ಇದರಲ್ಲಿ ಮೈಸೂರಿಗಾಗಲೀ, ಸಮಗ್ರ ದೇಶಕ್ಕಾಗಲಿ ಹಿತವನ್ನು ಮಾಡಬೇಕೆಂಬ ಉದ್ದೇಶ ಎದ್ದು ಕಾಣುತ್ತಿಲ್ಲ. ಯಾವಾಗಲಾದರೂ ನ್ಯಾಯ ಮಾಡುತ್ತೇವೆಂದು ಬಾಯಲ್ಲಿ ಹೇಳಿದರೆ ಸಾಲದು. ನ್ಯಾಯ ಮಾಡಿದ್ದಾರೆ ಎಂದು ಕಂಡು ಬರಬೇಕು. ಇವೊತ್ತು ಈ ಹಳೆಯ ಮೈಸೂರು ಸರಕಾರದ ಗೇಣಿ ಕಾನೂನನ್ನು ನಾವು ನೋಡಿದ್ದೇ ಆದರೆ ಅದು ಇರತಕ್ಕ ಪರಿಸ್ಥಿತಿಗೇ ಒಂದು ರೂಪಕೊಟ್ಟು ಅದನ್ನೇ ಅನ್ವು ಎಂದು ಹೇಳುವ ಕಾನೂನು ಆಗಿದೆ. ಅದರ ಮಾತೃ ಅಥವಾ ಪಿತೃ ಎಂದು ಕರೆಯಬಹುದಾದ ಶ್ರೀಮಾನ್ ಮಂಜಪ್ಪನವರು ಇಲ್ಲಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಅವರು ಮೇಲ್ಮನೆಯಲ್ಲಿ ಮಾತನಾಡುವಾಗ ರೈತರ ಸುಧಾರಣೆಗಳನ್ನು ಮನಗಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಕಾರ್ಯತಃ, ಏನನ್ನು ಮನಗಂಡಿದ್ದೇವೆ ಎಂದು ಹೇಳಿದ್ದಾರೆಯೋ ಅದನ್ನು; ಎಷ್ಟು ಮಟ್ಟಿಗೆ ಸಾಧಿಸಿದ್ದಾರೆ ಎಂಬುದು ಗೊತ್ತಾಗಬೇಕು. ಅವರು ಈ ಖಾತೆಯ ಮುಖ್ಯ ಮಂತ್ರಿ. ಅವರು ಮಂತ್ರಿಗಳಾಗಿದ್ದಾಗ,

(ಶ್ರೀ ಎಸ್. ಗೋಪಾಲಗೌಡ)

ಏನೇನು ಸಾಹಸ ಮಾಡಿಎಷ್ಟರ ಮಟ್ಟಿನ ರಕ್ಷಣೆ ಯನ್ನು ರೈತರಿಗೆ ಕೊಟ್ಟಿದ್ದಾರೆ ಎಂಬುದನ್ನು ಈ ರಾಜ್ಯಕ್ಕೆ ಹೇಳಬೇಕು. ಮನಗಂಡಿದ್ದೇವೆ ಎಂದು ಹೇಳಿದರೆ ಮಾತ್ರ ಸಾಲದು. ಎಲ್ಲರೂ ಮನ ಗಂಡಿದ್ದಾರೆ. ಜಮೀನ್ದಾರರೂ ಮನಗಂಡಿದ್ದಾರೆ, ರೈತರೂ ಮನಗಂಡಿದ್ದಾರೆ. ಅದನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ಕಳೆದ ಐದುವರ್ಷಗಳಲ್ಲಿ ಮೈಸೂರು ಸರಕಾರ ತಾನು ಹೇಳಿಕೊಳ್ಳುತ್ತಿರುವ ಸಾಧನೆ ಯಲ್ಲಿ ಯಾವುದನ್ನು ಕಾರ್ಯತಃಮಾಡಿದೆ? ಇಷ್ಟು ದಿವಸಕ್ಕೆ, 1957ನೆಯ ಇಸವಿಗೆ ರೈತರಿಗೆ ಅವಧಿ ಮುಗಿದು ಹೋಗುತ್ತದೆ ಎನ್ನುವುದು ಅವರಿಗೆ ಅರಿವು ಇರಲಿಲ್ಲವೇ? Ordinance ಹೊರಡಿಸಬೇಕಾದಂಥ ಸಂದರ್ಭ ಏನು ಒದಗಿತ್ತು, ಅಂಥ ಒತ್ತಡ ಏನು ಬಂತು? ಇದು ಹೊಸದಾಗಿ ನಿರ್ಮಾಣವಾಗಿರತಕ್ಕ ಸರಕಾರವಲ್ಲ. ಒಬ್ಬರಿಂದ ಒಬ್ಬರ ಕೈಗೆ ಹೋಗಿರ ಬಹುದು. ಮೊದಲು ಶ್ರೀಮಾನ್ ಕೆ. ಹನುಮಂತಯ್ಯ ಅವರು ಆರಂಭಮಾಡಿದರು. ಆ ಮೇಲೆ ಶ್ರೀಮಾನ್ ಕಡಿದಾಳ್ ಮಂಜಪ್ಪ ಅವರು ಈ ಹೊಣೆಯನ್ನು ಹೊತ್ತು ಕೊಂಡರು. ಅನಂತರ ಅವರ ಕೈತಪ್ಪಿ ಶ್ರೀಮಾನ್ ನಿಜ ಲಿಂಗಪ್ಪ ಅವರಿಗೆ ಹೋಯಿತು. ಇನ್ನೂ ಯಾರಿಗೆ ಹೋಗುತ್ತದೆಯೋ ಗೊತ್ತಿಲ್ಲ. ಆದರೆ ಸರಕಾರ ಅದೇ ಮೈಸೂರು ಸರಕಾರ ತಾನೇ? ಕಾನೂನು ಅದೇ ತಾನೇ? ಅದರಲ್ಲಿರತಕ್ಕ ಕಲಮುಗಳಲ್ಲಿ ಯಾವು ದಕ್ಕೆ ಅವಧಿ ಮುಗಿದು ಹೋಗಿದೆ, ಯಾವುದಕ್ಕೆ ಸರಕಾರದಲ್ಲಿ ಜೀವದಾನ ಮಾಡಬೇಕು, ಆ ಕಾನೂನಿ ನಲ್ಲಿ ಲೋಪದೋಷಗಳಿವೆಯೇ ಎನ್ನತಕ್ಕದ್ದು ಈ ಮೈಸೂರು ಸರಕಾರದವರಿಗೆ ಗೊತ್ತಿರಲಿಕ್ಕೇ ಬೇಕು. ಆದುದರಿಂದ ಈ ಮಸೂದೆಗಳು ರೈತರಿಗೆ ಹೆಚ್ಚಿನ ರಕ್ಷಣೆ ಕೊಡುತ್ತವೆ, ಅವರಿಗೆ ಜೀವದಾನ ಕೊಡ ಲಾಗಿದೆ, ಅವರನ್ನು ಉಳಿಸುವುದಕ್ಕೆ ಹೋಗಿದ್ದೇವೆ ಎನ್ನುವ ಮಾತುಗಳುಅವರಿಗೆ ಏನೋ ಒಂದುಉಪಕಾರ ಮಾಡುತ್ತೇವೆಂದು ಹೇಳುವ ಬರಿಯ ಸೋಗಿನಮಾತೇ ಹೊರತು ಮತ್ತೇನೂ ಅಲ್ಲ. ಅವರು ತಮಗೆ ಬೇಕಾದ ಕಾಲವನ್ನ ತೆಗೆದುಕೊಂಡು, ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಕಾನೂನನ್ನು ರಚನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿ ದ್ದಾರೆ.

ಶ್ರೀ ಕೊಡಪಾಲಅವರು ಭಾರಿಯಾಗಿ ಅವರ ಕಾರ್ಯ ನೀತಿಯನ್ನು ಸಮರ್ಥನೆ ಮಾಡಿಕೊಂಡರು. ಶ್ರೀ ಪಾಟೀಲರಂತೂ ನನ್ನ ಮೇಲೆ ಬಹಳವಾಗಿ ಉರಿದು ಬಿದ್ದು ಸಾಕಾದಷ್ಟು ಸಮರ್ಥನೆ ಮಾಡಿ ಕೊಂಡು, ತಮ್ಮನ್ನು ಪುನಃ ಆರಿಸಿ ಕಳುಹಿಸಿರುವುದೇ ತಮ್ಮ ಕಾರ್ಯನೀತಿಗೆ ಜನ ಸಂಪೂರ್ಣ ಒಪ್ಪಿಗೆ ಕೊಟ್ಟಿದೆ ಎಂದೂ ಗೋಪಾಲಗೌಡರನ್ನು ಆರಿಸಿ ಕಳುಹಿಸದೇ ಇರುವುದೇ ಅವರ ಕಾರ್ಯ ನೀತಿಗೆ ಜನ ಬೆಂಬಲಇಲ್ಲ ಎಂದೂ ಮಂತ್ರಿಗಳು ವ್ಯಾಖ್ಯಾನ ಮಾಡಿ ದರು. ಇದು ರಾಜಕೀಯ ಭಾಷಣವಾಗಿ ಬಿಡುತ್ತದೆ. ಆರೀತಿ ಡಿಬೇಟು ಆಗಬಾರದು. ಅವರು ಬಹಳ ಸಂಕೋಚದಿಂದಲೇ ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

Sri M. P. PATIL.—Sir, the Hon'ble Member started it first. I had no mind to raise that point.

ಶ್ರೀ ಎಸ್. ಗೋಪಾಲಗೌಡ.—ಸರಕಾರ ಬೇರೆ, ತಾವು ಬೇರೆ ಎಂದು ನಾನು ಹೇಗೆ ಹೇಳಲಿ? ಕುರ್ಚಿಗೆ ಹೇಳಲೇ! ಇಷ್ಟನೆಯ ಕುರ್ಚಿ ಎಂದು ನಂಬರನ್ನಾ ದರೂ ಹಾಕಿ ಬಿಡಿ, ಅದನ್ನೇ ಹೇಳುತ್ತೇನೆ, ತಮ್ಮ ಹೆಸರು ಬೇಡ, ನಾಲ್ಕನೆಯ ಕುರ್ಚಿಗೆ ಸಂಬಂಧ ಪಟ್ಟ ಮಂತ್ರಿಗಳು ಎಂದೇ ಹೇಳುತ್ತೇನೆ. ಅದರಲ್ಲಿ ನನ ಗೇನೂ ಅಭ್ಯಂತರವಿಲ್ಲವಲ್ಲ! ಸಾಧ್ಯವಾದಷ್ಟು ಇಂಪರ್ಸನಲ್ ಆಗಿರಬೇಕೆಂತಲೇ ನನ್ನ ಅಭಿಪ್ರಾಯ.

ಅಧ್ಯಕ್ಷರು.—ನಾಲ್ಕನೆಯ ಕುರ್ಚಿ ಎಂದು ಹೇಳ ಬೇಡಿ. ಗೌಪಿನ್ಯೂ ಮಿನಿಸ್ಟರು ಎಂದು ಹೇಳಿ. (ಸಭೆಯಲ್ಲಿ ನಗು)

ಶ್ರೀ ಎಸ್. ಗೋಪಾಲಗೌಡ.—ಆಗಲಿ. ಅವರು ಸಮರ್ಥನೆ ಮಾಡಿಕೊಂಡಿದ್ದಾರೆ. ನಿಜ, ದೇಶದಲ್ಲಿ ರೈತರಿಗಾಗಲಿ, ಕಾರ್ಮಿಕರಿಗಾಗಲಿ ಇವ್ವೊತ್ತು ತಮ್ಮ ಹಕ್ಕುಬಾಧ್ಯತೆಗಳೇನು, ಅವನ್ನು ಯಾವರೀತಿ ಉಳಿಸಿ ಕೊಳ್ಳಬೇಕು, ರಕ್ಷಣೆ ಮಾಡಿಕೊಳ್ಳಬೇಕು ಎನ್ನುವುದೂ ಕೂಡ ಗೊತ್ತಿಲ್ಲ. ಆ ಮಾತು ನಿಜ. ಅವರು ಅನ ಹಾಯ ಪರಿಸ್ಥಿತಿಯಲ್ಲಿ ಇದ್ದಾರೆ. ಯಾರು ಅವರನ್ನು ಹೆಚ್ಚು ಆಶ್ರಯಿಸಿಕೊಂಡು ಹೋಗುತಾರೆಯೋ ಅವರ ನ್ನು ನಂಬಿ ಮುಂದೆ ಹೋಗತಕ್ಕ ಜನ ನಮ್ಮವರು. ಆದ್ದರಿಂದಲೇ ಇವ್ವೊತ್ತೂ ಇಂಥ ಕ್ರೂರ ಉದ್ದೇಶಗಳು ಕಾಂಗ್ರೆಸ್ ಮುಖಂಡರು ಮತ್ತು ಕಾಂಗ್ರೆಸ್ ಸರಕಾರ ದ ಮನಸ್ಸಿನಲ್ಲಿ ಬಂದು ಮುಂದೆ ಮಾಡಬೇಕು ಎಂದು ಯೋಚನೆ ಮಾಡಿದ್ದರೂ ಕೂಡ ಅಂಥ ಉದ್ದೇಶ ಗಳನ್ನು ನಮ್ಮ ದೇಶದ ಮತದಾರರು ಅನೇಕ ಸಂದರ್ಭಗಳಲ್ಲಿ ಪೂರ್ವ ಭಾವಿಯಾಗಿ ತಿಳಿದುಕೊಳ್ಳ ಲಾರದೆ ಹೋಗಿದ್ದಾರೆ. ಇಂಥ ಅನೇಕ ಸಂದರ್ಭ ಗಳನ್ನೂ ಅವರು ಬರುವ ಐದು ವರ್ಷಗಳಲ್ಲಿ ಇನ್ನೂ ಕಾಣುತ್ತಾರೆ. ಮತ್ತು ಈಗಲೂ ಅನೇಕ ಸಂದರ್ಭ ಗಳಲ್ಲಿಕಂಡಿದ್ದಾರೆ. ಆದ್ದರಿಂದ ಬಹುಮತದಿಂದ ಬಂದು ಬಿಟ್ಟಿದ್ದೇವೆ, ಬಹು ಜನ ನಮ್ಮ ಹಿಂದೆ ಇದ್ದಾರೆ, ನಮ್ಮ ಕೃತಿ ನರಿ, ಇವರು ಮಾಡತಕ್ಕದ್ದೆಲ್ಲವೂ ನಮ್ಮ ಅನು ಕೂಲಕ್ಕಾಗಿಯೇ ನಡೆಯುತ್ತಾ ಇದೆ ಎಂದು ತಿಳಿದು ಕೊಂಡೇ ಓಟು ಕೊಟ್ಟಿದ್ದಾರೆ, ಅವರ ಬೆಂಬಲದಿಂದಲೇ ಇಲ್ಲಿ ಇದ್ದೇವೆ ಎಂದು ಏನಾದರೂ ತಿಳಿದುಕೊಂಡಿ ದ್ದರೆ ಅದು ಬಹಳ ದೊಡ್ಡ ತಪ್ಪು. ಮತ್ತು ಆದರಿಂದ ಅಪಾಯವೂ ಉಂಟು. ಹಾಗೆ ಅನ್ಯಥಾ ಅವರ ತಿಳಿದುಕೊಳ್ಳಬಾರದು. ಇವ್ವೊತ್ತು ಕಾಂಗ್ರೆಸ್ ಸರ್ಕಾರ ಬಂದಿದ್ದರೆ ಅದು ಅನಿವಾರ್ಯ, ಅನಿಷ್ಟ ಬಂದಿದೆ. ಬೇರೆ ಒಂದು ಪ್ರತಿಪಕ್ಷ ಸಂಘಟನೆಯಾಗಿ ಜನ ತಮ್ಮ ಪಕ್ಷವನ್ನು ತಾವೇ ಸಂಘಟನೆ ಮಾಡಿಕೊಂಡು ಕಾಂಗ್ರೆಸ್ಸನ್ನು ಅಧಿಕಾರದಿಂದ ಇಳಿಸುವ ತನಕವೂ ಅನಿವಾರ್ಯವಾಗಿ ಅವರು ಇರಬೇಕಾಗುತ್ತದೆ. ಅದು ಎಲ್ಲರಿಗೂ ಗೊತ್ತಾಗುತ್ತದೆ. ಆದ್ದರಿಂದ ಯಾರೂ ತಾವು ಮಾಡಿರುವುದಕ್ಕೆಲ್ಲಾ ಸಮರ್ಥನೆ ಕೊಟ್ಟ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ಕಳುಹಿಸಿದ್ದಾರೆ ಎಂದು ತಿಳಿದು ಕೊಳ್ಳಬಾರದು. ಈ ಮಸೂದೆಗಳಿಗೆ ರೈತರ ಮಾನ್ಯತೆ ಇದೆ, ಬೆಂಬಲವಿದೆ ಎಂದು ಸರಕಾರ ತಿಳಿದು ಕೊಳ್ಳುವುದಾದರೆ ಅದು ಬಹಳ ದೊಡ್ಡ ತಪ್ಪು. ಈಗಾಗಲೇ ವರ್ತಮಾನ ಬಂದಿರುವ ಹಾಗೆ ನಾನು ತಿಳಿದು ಕೊಂಡಿರುವಹಾಗೆ ಕಂದಾಯ ದ ಮಂತ್ರಿಗಳು ಬಂದಿರತಕ್ಕ ಪ್ರದೇಶದ ರೈತರು ಈ ಸುಗ್ರೀವಾಜ್ಞೆಯ ಸುದ್ದಿಯನ್ನು ಕೇಳಿ ಸಂಘಟಿತರಾ ಗುತ್ತಿದ್ದಾರೆ, ಅಲ್ಲಿ ಚಳುವಳಿ ಆರಂಭವಾಗಿದೆ, ಪ್ರತಿ ಹಳ್ಳಿಯಲ್ಲೂ, ಪ್ರತಿ ಜಿಲ್ಲೆಯಲ್ಲೂ ಸಭೆಗಳನ್ನು, ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲು ಏರ್ಪಾಡು ಗಳಾಗತ್ತಲಿವೆ. ಮತ್ತು ಅವರು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಲಿಕ್ಕೆ ಏನು ಶಕ್ತಿ ಸಂಘಟಿಸಿಕೊಳ್ಳ ಬೇಕೋ ಅದನ್ನ ಸಂಘಟಿಸಿಕೊಳ್ಳುತ್ತಾ ತಮ್ಮ ಉಳಿವನ್ನೂ ತಾವು ರಕ್ಷಣೆಯನ್ನೂ ನೀವು ಕಾನೂನನ್ನು

ಮಾಡಲಿ, ಮಾಡದೇ ಹೋಗಲಿ ಮಾಡಿಯೇ ತೀರುತ್ತಾರೆ.. ಅದರ ಬಗ್ಗೆ ಮಂತ್ರಿಗಳಿಗೆ ಯಾವ ಅನುಮಾನವೂ ಬೇಡ. ಆದ್ದರಿಂದ ಯಾವ ರೀತಿಯ ನಂದೇಹವೂ ಬೇಡ ಎಂದು ಈ ಸಭೆಯಲ್ಲಿ ಹೇಳಬಲ್ಲೆ. ಹಾಗೆಯೇ ಒಂದು ವೇಳೆ ತಾವು ಈ ಕಾನೂನನ್ನು ಮಾಡದೇ ಹೋಗಿದ್ದರೂ ಕೂಡ ನಮ್ಮ ರೈತರು ತಮಗಿರತಕ್ಕ ಉಳುಮೆಯ ಹೊಲವನ್ನು ಉಳಿಸಿಕೊಳ್ಳುವುದಕ್ಕೆ ಸಮರ್ಥರಾಗಿದ್ದಾರೆ. ಅವರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿ ಅವು ಗಳನ್ನು ಯಾವತ್ತೂ ಉಳಿಸಿಕೊಳ್ಳುತ್ತಾರೆ ಎನ್ನುವ ಭರವಸೆಯನ್ನು ಕೂಡ ನಾನು ಕೊಡಬಲ್ಲೆ. ಈ ಮಸೂದೆಯನ್ನು ಅಂಗೀಕಾರ ಮಾಡಲಿಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಸರ್ಕಾರದವರು ನಿರೀಕ್ಷೆ ಮಾಡುತ್ತಾರೆ, ನಿಜ. ನಾನು ವಿರೋಧ ಮಾಡುವು ದು ಇಷ್ಟೆ, ಕಾರಣ: ಇದರಲ್ಲಿ ರೈತರ ಹಿತಕ್ಕೆ ಧಕ್ಕೆ ಬರತಕ್ಕಂಥ ವಿಷಯಗಳು ಅಡಕವಾಗಿವೆ ಎಂದು ನಾನು ಹೇಳುತ್ತಾ ಇಲ್ಲ. ಈಗಿರತಕ್ಕ ಕಾನೂನುಏನಿದೆ ಅದು ರೈತರ ಹಿತವನ್ನು ಯಾವರೀತಿಯಲ್ಲೂ ರಕ್ಷಣೆ ಮಾಡುತ್ತಾ ಇಲ್ಲ. ಇಂಥ ನೆಪ ಮಾತ್ರದ ಕಾನೂನನ್ನು ನಾವು ಮಾಡಿಟ್ಟುಕೊಂಡು ಅದನ್ನೇ ರೈತರ ಹಿತ ರಕ್ಷಣೆಯ ಕಾನೂನು ಎಂದು ಕರೆಯುತ್ತಾ ಇದ್ದೇವೆ. ಇದರಿಂದ ಯಾವ ರೈತನ ರಕ್ಷಣೆ ಮಾಡುವುದಕ್ಕೂ ಆಗಿಲ್ಲ. ಎಕ್ಸಿಕ್ಯುಟೀವ್ ಸ್ಟೈಡ್ ನೋಡಿದರೆ ಕಳೆದ ೧೦ ವರ್ಷಗಳಲ್ಲಿ ಬಹಳ ಹಾಸ್ಯಾಸ್ಪದವಾದ ರೀತಿಯಲ್ಲಿ ಮತ್ತು ಉದಾಸೀನ ರೀತಿಯಲ್ಲಿ ನರ್ಕಾರದವರು ವರ್ತಿಸಿದ್ದಾರೆ. ಯಾವ ರೈತನಿಗೂ ರಕ್ಷಣೆಯನ್ನು ಕೊಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಆದ್ದರಿಂದ ಇವತ್ತು ನೀವು ಈ ಮಸೂದೆಯನ್ನು ತಂದು ರೈತರ ರಕ್ಷಣೆಗೆ ಹೊರಟ್ಟಿದ್ದೇವೆ ಎಂದು ಹೇಳತಕ್ಕ ಒಂದು ಮಾತು ಏನಿದೆ ಅದು ಬರಿಯ ಪೊಳ್ಳ ಮಾತಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ನಾನು ಇವೊತ್ತು ಈ ಮಸೂದೆಯನ್ನು ವಿರೋಧಿಸಬೇಕಾಗಿದೆ. ರಚನಾ ತ್ಮಕ ಸಲಹೆಗಳನ್ನು ಕೊಡಲಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಕೊಟ್ಟರಾಗತಕ್ಕ ಉಪಯೋಗವಾದರೂ ಏನು ಎಂದು ನನ್ನ ನಂದೇಹ. ನಮ್ಮ ಸಲಹೆಗಳನ್ನು ಕಾರ್ಯಗತ ಮಾಡುವಷ್ಟು ಚೈತನ್ಯ, ಧೈರ್ಯ, ಸಾಮರ್ಥ್ಯ ನಿಮಗೆ ಇದೆಯೆ, ಎಂದು ನಾನು ಪ್ರಶ್ನೆ ಮಾಡುತ್ತೇನೆ. ನನ್ನ ರಚನಾತ್ಮಕ ಸಲಹೆ ಆದರೂ ಇಷ್ಟೆ. ಉಳುಮೆ ಮಾಡತಕ್ಕ ಪ್ರತಿಯೊಬ್ಬ ರೈತನಿಗೂ ಅವನಿಗೆ ಒಂದು ಕನಿಷ್ಠ ಪರಿಮಿತಿಯ ಭೂಮಿಯನ್ನು ಕೊಡಿ. ಇದೇ ನನ್ನ ರಚನಾತ್ಮಕ ಸಲಹೆ. ಇದನ್ನು ಮಾನ್ಯ ಗವರ್ನಮೆಂಟಿಗೆ ಸಚಿವರು ಗಮನಕ್ಕೆ ತೆಗೆದು ಕೊಂಡು ಆ ರೀತಿ ಒಂದು ಕಾನೂನನ್ನು ನಾಳೆ ತರುವುದಾದರೆ ಬಹಳ ಸಂತೋಷ. ನಾನು ಅವರ ಸೇವಕನಾಗಿ ಕೆಲಸ ಮಾಡುವುದಕ್ಕೆ ತಯಾರಾಗಿ ದ್ದೇನೆ. ಕನಿಷ್ಠ ಪರಿಮಿತಿಯ ಭೂಮಿ,ಒಂದು ಎಕರಾ ಮಿಕ ಹೋಲ್ಡಿಂಗ್ ರಚನೆ ಮಾಡಿ.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉಂಟಾಗುವುದಿಲ್ಲ. ಮುಂದೆ ಕಮಿಟಿ ರಚನೆಮಾಡಿದಮೇಲೆ ಆ ಕಮಿಟಿಯ ಮುಂದೆ ಆ ವಿಚಾರವನ್ನು ಇಡಬೇಕೇ ವಿನಾ ಈಗ ಸದ್ಯಕ್ಕೆ ಅದು ಉಂಟಾಗುವುದಿಲ್ಲ.

4 P.M.

ಶ್ರೀ ಎಸ್. ಗೋಪಾಲಗೌಡ.—''ಗೋಪಾಲಗೌಡರ ಭಾಷಣದಲ್ಲಿ ಬಹಳ ರಚನಾತ್ಮಕವಾದ ಸಲಹೆಗಳಿರುತ್ತವೆ ಮತ್ತು ಅವರ ಟೀಕೆಗಳಿಂದ ಬಹಳ ಸಾಫಲ್ಯವಾಗುತ್ತದೆ ಎಂದು ತಿಳಿದುಕೊಂಡಿದ್ದೆ but I was greatly disappointed by his performance'' ಎಂದು ಮಾನ್ಯ ಸಚಿವರು ಹೇಳಿದ್ದರಿಂದ ಆ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ. ಎಲ್ಲ ಸಂದರ್ಭಗಳನ್ನೂ ಉಪಯೋಗಿಸಿಕೊಂಡು ಹೇಳುತ್ತಿಲ್ಲ.

Mr. SPEAKER.—I tried to explain the scope of the discussion. I shall once again explain the scope of the discussion. We are now dealing with an amending Bill. The relevant portions of the original Act also are in question and to that extent they are also relevant to the discussion. Hon'ble Members can offer remarks not only on the amending clauses but also on the relevant original sections of the Act itself and to that extent the original Act also is in question, but, if Hon'ble Members want to challenge or offer remarks on the whole Act itself, that will not be relevant to the discussion.

ಶ್ರೀ ಎಸ್. ಗೋಪಾಲಗೌಡ.—ಹೆನರು ಬೇರೆ ಯಾದರೂ ಸರ್ಕಾರದವರು ಒಮ್ಮೆಗೇ ಹೊರಡಿಸಿರುವ ನಾಲ್ಕು ಸುಗ್ರೀವಾಜ್ಞೆಗಳು ಒಂದಕ್ಕೊಂದಕ್ಕೆ ಸಂಬಂಧ ಹೊಂದಿವೆ. ಉದ್ದೇಶಗಳ ಮತ್ತು ಕಾರಣ ಗಳ ವಿವರವನ್ನು ನೋಡಿದರೆ ನಾಲ್ಕು ಮಸೂದೆಗಳೂ ಕೂಡ ಸ್ವಲ್ಪ ಹೆಚ್ಚುಕಡಮೆ ಒಂದೇ ಆಗಿವೆ. ಸಚಿವರು ಪ್ರೈಯಕ್ತಿಕವಾಗಿ ಚುನಾವಣೆ ವಿಷಯ, ಓಟು ಕೊಟ್ಟ ವಿಚಾರ ಇದನ್ನೆಲ್ಲ ಹೇಳಿದರು. It can form part of a very long debate which will not end in the near future. ವರ್ಡಿಕ್ಟನ್ನು ಥಾಲೆಂಜ್ ಮಾಡಬೇಕಾಗುತ್ತದೆ.

Mr. SPEAKER.—It is no use speaking in general terms. It is a fact that the question of election was also brought in, but it was brought in not only by one Member but by so many others also. I think that both the Hon'ble Member now speaking and the Hon'ble Minister were also responsible for these remarks. So there is no use in the Hon'ble Member saying that the Hon'ble Minister said so or he did not say so. Both of them said that.

ಶ್ರೀ ಎಸ್. ಗೋಪಾಲಗೌಡ.—ಈ ಮಸೂದೆಯ ಬಗ್ಗೆ ನಾನು ರಚನಾತ್ಮಕ ಸಲಹೆಗಳನ್ನೇನೋ ಕೊಡುತ್ತೇನೆ. ಆದರೆ, ನಾನು ಮೊದಲೇ ಹೇಳಿದ ಹಾಗೆ, ಅವು ಗಳನ್ನು ಕೇಳಿ ಹಾಗೆಯೇ ಕೈ ಬಿಡುವುದಕ್ಕೆ ಸಿದ್ಧರಾಗಿದ್ದಾರೆಂಬುದು ನನಗೆ ಗೊತ್ತಿದೆ. ಎಷ್ಟು ಸಲಹೆಗಳನ್ನು ಈಡೇರಿಸಿಕೊಡಬಲ್ಲರೆಂಬುದು ಬಹಳ ದೊಡ್ಡ ಪ್ರಶ್ನೆ. ಈ ಐದು ವರ್ಷಗಳಲ್ಲಿ ಹಳೆಯ ಮೈಸೂರು ಸರ್ಕಾರ ದವರು ಈ ಗೇಣಿ ಮಸೂದೆಯಲ್ಲಿ ಆಗಬೇಕಾಗಿದ್ದ ತಿದ್ದುಪಡಿಗಳನ್ನು ಮಾಡದೆ ಸೋತು ಹೋಗಿದ್ದಾರೆ. ಅವರಿಗೆ ಅದು ಸಾಧ್ಯವಾಗಿಲ್ಲ. ಈಗ ತಿದ್ದುಪಡಿ ಮಾಡು ತ್ತಿರುವ ಅಂಶವೂ ಕೂಡ ಬಹಳ ಸಂಕೀರ್ಣವಾದುದು. 1957ನೆಯ ಇಸವಿಗೆ ಲ್ಯಾಪ್ಸಾಗುವ ಯಾವುದೋ ಒಂದು ಕ್ಲಾಜನ್ನು ದೃಷ್ಟಿಯಲ್ಲಿಟ್ಟು ಆ ರೀತಿ ಆಗಬಾರ

(ಶ್ರೀ ಎನ್. ಗೋಪಾಲಗೌಡ)

ದೆಂದು ಆರ್ಡಿನೆನ್ಸ್ ಮೂಲಕ ಕಾನೂನು ಮಾಡುವುದಕ್ಕೆ ಈ ದಿವನ ಹೊರಟಿದ್ದಾರೆ. ಈ ಕಾನೂನಿನಲ್ಲಿರುವ ಅನೇಕ ಲೋಪದೋಷಗಳನ್ನು ಈ ದಿವನ ಪರಿಹಾರ ಮಾಡುವುದಕ್ಕೆ ಅವಕಾಶವಿದೆ. ಇನ್ನೂ ಅನೇಕ ತಿದ್ದುಪಡಿಗಳನ್ನು ಮಾಡಬಹುದಾಗಿತ್ತು. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಮುಂಬಯಿನಲ್ಲಿರತಕ್ಕ $\frac{1}{6}$ ಅಂಶ ಗೇಣಿಯ ಪದ್ಧತಿಯನ್ನು ಇಲ್ಲಯೂ ಜಾರಿಗೆ ತರುವಂತೆ ಮಾಡಬಹುದಾಗಿತ್ತು. ಇದು ರಚನಾತ್ಮಕ ಸಲಹೆ; ಇಷ್ಟನ್ನಾದರೂ ಇಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿತ್ತು. ಇದರಲ್ಲಿ ಮೈಸೂರು ಸರ್ಕಾರದವರು $\frac{3}{4}$ ಅಂಶ ಸಾರ್ವತ್ರಿಕವಾಗಿ, $\frac{1}{4}$ ಅಂಶ ಮಲೆನಾಡು ಪ್ರಾಂತಗಳಲ್ಲಿ ಎಂದು ನಿಗದಿಮಾಡಿದ್ದಾರೆ. ರೈತರಿಗೆ ಇದರಿಂದ ಅನುಕೂಲವಾಗಿದೆಯೆ? ಅವರು ಬೇರೆ ಪ್ರದೇಶಗಳಿಗೆ ಹೋಗಿ $\frac{1}{4}$ ಅಂಶ ಕೊಡುತ್ತಿದ್ದಾರೆಯೆ, ಇಲ್ಲವೆ ಎಂದು ಹೇಗೆ ತಿಳಿದುಕೊಳ್ಳಬೇಕು? ಇದನ್ನು ಈ ದಿವನದವರೆಗೂ ಸರ್ಕಾರದವರಿಗೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕಾನೂನಿನಲ್ಲೇನೋ ಇದೆ, ನಿಜ ಈ ಹೊತ್ತು ಮೂರು ವರ್ಷಗಳ ಬಾಕಿಯ ಮೇಲೆ ದಾವಹಾಕಿ ಲ್ಯಾಂಡ್ ರೆವೆನ್ಯೂ ಕೋಡಿನ ಮುಖಾಂತರ ಜಮೀನನ್ನು ಬಿಡಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದಾರೆ. ಅದನ್ನು ತಡೆಯುವುದಕ್ಕೆ ಯಾವ ಒಂದು ಆರ್ಡಿನೆನ್ಸ್ ಸರ್ಕಾರ ಹೊರಡಿಸುವುದಕ್ಕಾಗಲಿಲ್ಲ. ಪ್ರತಿಯೊಬ್ಬ ಜಮೀನುದಾರನೂ ವರ್ಷ ವರ್ಷ ಗೇಣಿಯನ್ನು ತೆಗೆದುಕೊಂಡೂ ರೈತರನ್ನು ಬಿಡಿಸಬೇಕೆಂದು ಮನಸ್ಸು ಬಂದಾಗ ನೇರವಾಗಿ ಕೋರ್ಟಿಗೆ ಹೋಗಿ ಮೂರು ವರ್ಷಗಳಿಂದ ಗೇಣಿ ಕೊಟ್ಟಿಲ್ಲವೆಂದೇ ವಾದಿಸುತ್ತಾರೆ. ಕೊಟ್ಟಿರುವುದಕ್ಕೆ ಆಧಾರವೇನು? ಅದಕ್ಕೆ ರಸೀದಿಯನ್ನು ಕೊಟ್ಟಿರುವುದಿಲ್ಲ. ನಮ್ಮ ರಾಜ್ಯದಲ್ಲಿ ಕೊಟ್ಟಿದ್ದಕ್ಕೆ ರಸೀದಿ ಕೊಡುವ ಪದ್ಧತಿ ಜಾರಿಯಲ್ಲೇ ಇಲ್ಲ; ಅದರಲ್ಲೂ ಬಡರೈತನಿಂದ ಜಮೀನುದಾರರು ಗೇಣಿ ತೆಗೆದುಕೊಳ್ಳುವುದಕ್ಕೆ ರಸೀದಿ ಕೊಡುವ ಪದ್ಧತಿ ದೇಶದಲ್ಲಿರಲಿಲ್ಲ. ಕಾನೂನು ಪ್ರಕಾರ ಫಾರಂನಲ್ಲಿ ರಸೀದಿ ಬರೆದು ಕೊಡುವ ಪದ್ಧತಿಯನ್ನು ಬಹು ಕಡಮೆ ಜನ ಅನುಸರಿಸುತ್ತಾರೆ. ಈ ದೊಡ್ಡ ಲೋಪ ಹೋಗಲಾಡಿಸುವುದಕ್ಕೆ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಈ ದಿವನ ಸಂಘಟಿತವಾಗಿರುವ ಮತ್ತು ಜಾಗೃತರಾಗಿರುವ ಜಮೀನುದಾರರು ಸ್ವಂತ ಸಾಗುವಳಿ ಮಾಡದಿದ್ದರೂ ನಾವೇ ಮಾಡುತ್ತಿದ್ದೇವೆಂದು ಶ್ಯಾನುಭೋಗರಿಂದ ಪಹಣಿಯಲ್ಲಿ ಬರೆಸಿಕೊಳ್ಳುತ್ತಿದ್ದಾರೆ. ಅದನ್ನು ನಾವು ನೋಡುತ್ತಿದ್ದೇವೆ. ಮೂರು ನಾಲ್ಕು ವರ್ಷಗಳಿಂದ ರಸೀದಿ ಬರೆಸಿಕೊಳ್ಳುತ್ತಿಲ್ಲ. ಓದುಬರಹ ಬಾರದಿರುವ ರೈತರಿಗೆ ಇದರ ಬೆಲೆ ಗೊತ್ತಿರುವುದಿಲ್ಲ. ಆದರೆ ಜಮೀನುದಾರರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಶ್ಯಾನುಭೋಗರನ್ನು ಹಿಡಿದು ಇಂಥ ಭೂಮಿಯನ್ನು ತಾವು ಸ್ವಂತವಾಗಿ ಇಷ್ಟು ದಿನಗಳಿಂದ ಸಾಗು ಮಾಡುತ್ತಿರುವುದಾಗಿ ಬರೆಸಿಕೊಳ್ಳುತ್ತಾ ಇರುತ್ತಾರೆ.

ಸಾಗರ ತಾಲ್ಲೂಕಿನಲ್ಲಿ ಎಂತಹ ತೊಡಕಿನ ಪರಿಸ್ಥಿತಿ ಉಂಟಾಗಿದೆ ಎಂಬುದನ್ನು ನೋಡಬೇಕು. ಮಸೂದೆಯಲ್ಲಿ ಯಾವದೊಂದು ವಿಧಾನವನ್ನೂ ಸೇರಿಸದೆ ಇದ್ದುದರಿಂದ ರೈತರ ಉದ್ಧಾರವಾಗುವುದೆಂದು ಹೇಗೆ ಹೇಳಲಿಕ್ಕೆ ಬರುವುದು? ಅದಕ್ಕೆಲ್ಲ ಕಾಲಬೇಕು, ಕಮಿಟಿ ರಚನೆಯಾಗಬೇಕು ಮತ್ತು ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳಿದರು. ಇದು ಎಲ್ಲ ನಮಗೆ ತೊಂದರೆಯೇ. ಇದು ನಿಜವಾದ ತೊಂದರೆ ಅಲ್ಲ. ಸರಕಾರಕ್ಕೆ ಹಾಗೆ ಮಾಡಲು ಮನಸ್ಸು ಇಲ್ಲ. ಈ ಮಸೂದೆಯಲ್ಲಿ ಬಹಳ ಲೋಪದೋಷಗಳು ಇವೆ. ಇದನ್ನೆಲ್ಲ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮೂಲ ವಿಷಯದ ಬಗ್ಗೆ ಒಮ್ಮತಕ್ಕೆ ಬಂದರೆ, land to the tiller ಎಂಬ ಪಾಲಿಸಿಯನ್ನು ಒಪ್ಪಿಕೊಂಡುಬಿಟ್ಟರೆ ರೈತನ ಹಕ್ಕನ್ನು ಕಾಯಂ ಮಾಡುವಲ್ಲಿ ಏನೂ ತೊಂದರೆಯಾಗುವುದಿಲ್ಲ. ಬರಿಯ ಜಮೀನ್ದಾರರು ನಮ್ಮ ದೇಶದಲ್ಲಿ ಎಲ್ಲಿದ್ದಾರೆ? ಎರಡು ಮೂರು ಎಕರೆ ಭೂಮಿಯನ್ನು ಇಟ್ಟುಕೊಂಡು ಸಾಗುವಳಿ ಮಾಡುವವರು ಅನೇಕರು ಇದ್ದಾರೆ. ಆದಕಾರಣ ನಣ್ಣ ಹಿಡುವಳಿದಾರರಿಗೆ ರಕ್ಷಣೆ ಕೊಡಬೇಕು. ಒಂದು ನಣ್ಣ ಸಂಸಾರಕ್ಕೆ ಎಷ್ಟು ಭೂಮಿಯ ಆವಶ್ಯಕತೆ ಇದೆಯೊ ಅಷ್ಟು ಇರತಕ್ಕದ್ದು. ಭೂಮಿಯ ಹುಟ್ಟುವಳಿಯ ಸಾಧನೆಯಾಗಿರುವುದು; ಉತ್ಪನ್ನವನ್ನು ಯಾರು ಮಾಡುತ್ತಾರೋ ಅವರ ಕೈಯಲ್ಲಿ ಭೂಮಿಯು ಇರಬೇಕು. ಭೂಮಿಯಲ್ಲಿ ಉತ್ಪನ್ನವಾದ ಪದಾರ್ಥಗಳ ಬೆಲೆಯ ನಿರ್ಧಾರ ಮಾಡುವ ಹತೋಟಿಯು ಇರತಕ್ಕದ್ದು. ಇಲ್ಲದೇ ಹೋದರೆ ಸಮಾಜವಾದಿ ಸಮಾಜ ರಚನೆಯು ಮಾತಿನುಳ್ಳು ಆಗುತ್ತದೆ. ಭೂಮಿಯ ಮೇಲಿನ ಹಕ್ಕನ್ನು ರೈತನಿಗೆ ಒದಗಿಸಿಕೊಡಬೇಕು. ಮೈಸೂರು ಸರಕಾರ ಇಲ್ಲಿಯವರೆಗೆ ಈ ವಿಷಯದ ಸಂಬಂಧದಲ್ಲಿ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಈಗ ಮಾತ್ರ ಈ ಆರ್ಡಿನೆನ್ಸು ಹೊರಡಿಸಿ ಕಾನೂನು ತಿದ್ದುಪಡಿ ಮಾಡಬೇಕೆಂದಿರುತ್ತಾರೆ. ಈಗಿನ ಕಾಲದಲ್ಲಿ land to the tiller ಎಂಬ ಧ್ಯೇಯದ ಕಡೆಗೆ ದುರ್ಲಕ್ಷಿಸಬಾರದು. ವಿವರಗಳು ಇಲ್ಲದೆ ಇರುವಾಗ ಈ ಮಸೂದೆಗೆ ಬೆಂಬಲ ಕೊಡಲು ಸಾಧ್ಯವಿಲ್ಲ. ಅನ್ಪಷ್ಟವಾದ ಧೋರಣೆಗೆ ನಾವು ಬೆಂಬಲ ಕೊಡಲು ಕಠಿನವಾಗುತ್ತದೆ. ಬೆಂಬಲ ಕೊಡಲು ಸಾಧ್ಯವೇ ಇಲ್ಲ. ನಿರ್ದಿಷ್ಟವಾದ ಧೋರಣೆಗೆ ಹೆಚ್ಚಾಗಿ ಬೆಂಬಲ ಕೊಡಲು ಸಾಧ್ಯವಿದೆ. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ತಮ್ಮೆಲ್ಲರ ಗಮನಕ್ಕೆ ತರುತ್ತೇನೆ. ಕೋಲಾರ ಚಿನ್ನದ ಗಣಿಯ ರಾಷ್ಟ್ರೀಕರಣದ ವಿಷಯ ಬಂದಾಗ ವಿರೋಧ ಪಕ್ಷದವರು ವಿರೋಧ ಮಾಡಲಿಲ್ಲ. ಅದು ಹೆಚ್ಚು ಬೇಗನೆ ಆಗಬೇಕೆಂದು ನಾವು ಒತ್ತಾಯ ಮಾಡಿದೆವು. ಆ ಕೆಲಸಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆ. ಅಂತಹ ಘಟನೆಗಳು ಇವೆ. ಜನರಿಗೆ ಅನುಕೂಲವಾದದ್ದು, ರೈತರ ಹಿತರಕ್ಷಣೆ ಮಾಡತಕ್ಕಂಥ ಪ್ರಗತಿ ಪರವಾದ ಇಂಥ ಕಾನೂನು ಜಾರಿಯಲ್ಲಿ ಬರುವದನ್ನು ತಡೆಗಟ್ಟುವದಕ್ಕೆ ಒಪ್ಪಿಗೆ ಅಥವಾ ಬೆಂಬಲ ಕೊಡಲು ಸಾಧ್ಯವೇ ಇಲ್ಲ. ಕಾಂಗ್ರೆಸ್ ಪಕ್ಷದಲ್ಲಿಯ ಸದಸ್ಯರು ಪಕ್ಷದ ಶಿಸ್ತಿಗೆ ಒಳಪಟ್ಟಿರುವುದರಿಂದ ಒಂದು ವೇಳೆ ಈ ಮಸೂದೆಯ ಮೇಲೆ ಡಿವಿಜನ್ ಕೇಳಿಸಿದರೆ ಅದಕ್ಕೆ ಬೆಂಬಲ ಕೊಡಲು ಎದ್ದು ನಿಲ್ಲಬಹುದು. ಅಲ್ಲದೆ ಈ ಮನಾದೆಗೆ ಸಮರ್ಥನೆ ಸಹ ಮಾಡಬಹುದು. ಆದರೆ ಈ ಮಸೂದೆಯು ನಿಜವಾಗಿಯೂ ನ್ಯಾಯವಾಗಿದೆ, ರೈತರ ರಕ್ಷಣೆಯಾಗುತ್ತದೆ ಎಂದು ತಿಳಿದು ಒಪ್ಪಿಕೊಂಡು ಸಮರ್ಥನೆಯನ್ನು ಅನೇಕ ಕಾಂಗ್ರೆಸ್ ಪಕ್ಷದಲ್ಲಿಯ ಸದಸ್ಯರು ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸಂದರ್ಭಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಕಾರ್ಯಕ್ರಮವನ್ನು ಹಾಕಿ ಕೊಂಡು ಬೀಸುವ ದೊಣ್ಣೆ ತಪ್ಪಿದರೆ ಸಾಕು ಎಂಬ ಧೋರಣೆಯನ್ನು ಅನುಸರಿಸುವದು ಉಚಿತವಲ್ಲ. ಈ ಸಂದರ್ಭದಲ್ಲಿ ಸರಕಾರದವರು ಬದಲಿಸದೆ ಪ್ರಗತಿ ಪಥದಲ್ಲಿ ಮುಂದುವರಿದಿದ್ದರೆ ದೇಶಕ್ಕೆ ಯಾವ ಅಪಾಯವೂ ಇಲ್ಲೆಂದು ಹೇಳಬೇಕಾಗುತ್ತದೆ. ಈಗ ಮಾಡುತ್ತಿರುವದು ಯಾರಿಗೂ ಒಳ್ಳೆಯದಲ್ಲ, ಕಾಂಗ್ರೆಸ್

ಪಕ್ಷಕ್ಕೂ ಒಳ್ಳೆಯದಲ್ಲ. ಆದುದರಿಂದ ಸಾಧ್ಯವಾದ ಮಟ್ಟಿಗೆ ಸರಕಾರದ ಧೋರಣೆಯು ಸ್ಪಷ್ಟವಾಗಿರ ಬೇಕು. ಆದರ್ಶವನ್ನು ಎಷ್ಟರಮಟ್ಟಿಗೆ ಸಾಧ್ಯವಾಗುವಂತೆ ಮಾಡುತ್ತಿದ್ದೇವೆ ಎಂಬುದು ಬೇರೆ. ಶೇಕಡಾ 50ರಿಂದ 80ರವರೆಗೆ ಸಾಧಿಸಿಕೊಳ್ಳಬಹುದು. ಆದರೆ ಆದರ್ಶವು ಹೇಳಿಕೆಯಲ್ಲಿ ಒಂದು ಕೃತಿಯಲ್ಲಿ ಮತ್ತೊಂದು ಹೀಗೆ ವಿರೋಧಾಭಾಸ ಆಗುತ್ತಿದೆ. ಜನತೆಯ ನಂಬಿಕೆಯನ್ನು ಕಳೆದುಕೊಳ್ಳುವದಕ್ಕೆ ಇಂಥ ಒಂದು ಕೃತಿಯು ಸಾಕು. ಈಗ ನಂಬಿಕೆ ಕಳಕೊಳ್ಳುತ್ತಿದ್ದೀರಿ ಎಂದು ಎಚ್ಚರಿಕೆ ಕೊಡಬೇಕಾಗುತ್ತದೆ. ಮೈಸೂರು ಸರಕಾರ ಇಂತಹ ಕೃತಿಗಳಿಗೆ ಆಸ್ಪದ ಕೊಡಬಾರದು. ಇಂತಹುದಕ್ಕೆ ಈ ಮಸೂದೆ ಕಷ್ಟವಾಗಿರಲಾರದು. ಇವೊತ್ತು ಮೈಸೂರಿನಲ್ಲಿರತಕ್ಕ ರೈತನಿಗೆ ಬೇರೆ ಐದು ವರ್ಷದ ಅವಧಿಯನ್ನು ಕೊಟ್ಟರೆ ಸಾಕು. ಅವರ ಪರಿಸ್ಥಿತಿ ತೀರ ಕಷ್ಟವಾಗಿದೆ. ಅವರಿಗೆ ಯಾವ ರಕ್ಷಣೆಯೂ ಇಲ್ಲದಹಾಗಿದೆ. ಗೇಣಿ ಹೊರೆ ಜಾಸ್ತಿಯಾಗಿದೆ. ತಾತ್ಕಾಲಿಕವಾಗಿ ಒಂದು ಕಾನೂನನ್ನು ನೂರುವರ್ಷ ಮುಂದುವರಿಸಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಈ ಹತ್ತುವರ್ಷಗಳಲ್ಲಿ ಅಭಿವೃದ್ಧಿಯಾಗುತ್ತದೆ ಎಂದು ನಿರೀಕ್ಷೆಯುಳ್ಳವರಲ್ಲಿ ನಾನೂ ಒಬ್ಬ. ಆದರೆ ಇದು ಅಳಿಯದೆ ಇರುವುದಕ್ಕೆ ಕಾಂಗ್ರೆಸ್ಸು ಕಾರಣ. ಅವರು ಇವೊತ್ತು ಕಾನೂನಿನಲ್ಲಿ ಮುಂದುವರಿಯುವಂತೆ ಹೇಳಿ ಎಲ್ಲ ಏರ್ಪಾಡುಗಳನ್ನೂ ಮಾಡಿರುವುದಕ್ಕೆ ಬಹುವಾದ ಪ್ರೋತ್ಸಾಹ, ಸಹಕಾರ ಧೋರಣೆ—ಇದನ್ನು ನಾವು ನಂಬಿಕೊಳ್ಳುತ್ತೇವೆ. ಆದ್ದರಿಂದ ಈ ಕಾಂಗ್ರೆಸ್ಸು ಕಾನೂನಿನಲ್ಲಿರುವ ನಿರ್ಧಾರಕ್ಕಿಂತಲೂ ಈ ಪದ್ಧತಿ ಹೇಗೆ ಮುಂದುವರಿಯಬೇಕೆಂದು ಹೇಳಬೇಕಾಗಿಲ್ಲ. ಈ ಸಂದರ್ಭದಲ್ಲಿ ತಾವು ರೈತರಿಗೆ ರಕ್ಷಣೆ ದೊರೆಯುವಂತೆ ಮಾಡಬೇಕು. ಇಂತಹ ಸಮಯದಲ್ಲಿ ನೀವು ನ್ಯಾಯವಾಗಿ ಏನು ಮಾಡಬೇಕೋ ಆ ರೀತಿಯಾಗಿ ಕಾನೂನಿನಲ್ಲಿ ರಕ್ಷಣೆ ದೊರಕಿಸಿಕೊಡಬೇಕು ಅನ್ಯಾಯವಾಗುವಂತಹ ಕೆಲಸಗಳನ್ನು ಮಾಡಬಾರದು. ಇದೊಂದು ತಪ್ಪು ಹೆಜ್ಜೆ. ಈ ಹೆಜ್ಜೆ ಇಡುವುದು ಕಾಂಗ್ರೆಸ್ ಪಕ್ಷಕ್ಕೇ ಅಲ್ಲ, ಇಡೀ ದೇಶಕ್ಕೆ ಕ್ಷೇಮಕರವಲ್ಲ. ದೇಶಕ್ಕೆ ಭೀಕರವಾಗಿದ್ದಂಥ ಇಂತಹ ಸಮಸ್ಯೆಯ ವಿಷಯದಲ್ಲಿ ಸರಕಾರ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ನನಗೆ ಭಯವಾಗುತ್ತದೆ. ಈ ಮಸೂದೆ ಅಂಗೀಕೃತವಾದರೆ ಇದಕ್ಕಿಂತ ಕರಾಳವಾದ ಕೃತಿ ಬೇರೊಂದಿಲ್ಲ. ಇದು ಸಭೆಗೆ ಗೌರವ ತರುವ ಕಾನೂನಾಗುವುದಿಲ್ಲ. ಹಿಂದೆ ಇದ್ದ ಪರಿಸ್ಥಿತಿಯೇ ಬೇರೆ, ಈಗಿರುವ ಪರಿಸ್ಥಿತಿಯೇ ಬೇರೆ. ಎಲ್ಲ ಪರಿಸ್ಥಿತಿಗಳನ್ನೂ ನೋಡಿ ಇಲ್ಲಿ ಮಾತನಾಡಬೇಕು ಮಾನ್ಯ ಮಂತ್ರಿಗಳಾದ ಶ್ರೀ ಪಾಟೀಲರು ಹೇಳಿರುವಂತೆ ನಾನು ನಮ್ಮ ರೈತರ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತೇನೆ. ಅವರು ಹೇಳಿದಂತೆ ಅವರು ಇಲ್ಲಿ ಮಂತ್ರಿ ಆಗಿರುವವರೆಗೆ ಇನ್ನೈದು ವರ್ಷಗಳಕಾಲ ನಾನು ಹಳ್ಳಿಯಲ್ಲಿಯೇ ಇರುತ್ತೇನೆ. ಎಲ್ಲ ಹಳ್ಳಿಗಳಿಗೂ ಹೋಗುತ್ತೇನೆ. ಅವರ ಜಿಲ್ಲೆಯ ಹಳ್ಳಿಗಳಿಗೂ ಹೋಗುತ್ತೇನೆ. ಈಗಾಗಲೇ ಬೀಜಾಪುರ, ಬೆಳಗಾಂ, ಧಾರವಾಡ ಜಿಲ್ಲೆಗಳಿಗೆ ಹೋಗಿದ್ದೆ ಅಲ್ಲದೆ ಈಗ ಕಾರವಾರದಿಂದ ಆಹ್ವಾನ ಬೇರೆ ಬಂದಿದೆ. ಆದರೆ ಶ್ರೀ ಪಾಟೀಲರು ಹೇಳಿದಂತೆ ಈ ಹಳ್ಳಿಗಳಿಗೆಲ್ಲ ಹೋಗಲು ಈ ಐದುವರ್ಷಗಳ ಕಾಲ ಸಾಲದಲ್ಲ ಎನ್ನುವುದೇ ನನ್ನಚಿಂತೆ. ಹೇಗಾದರೂ ನನ್ನ ಕರ್ತವ್ಯವನ್ನು ಪರಿಪೂರ್ಣಮಾಡುತ್ತೇನೆ. ಶ್ರೀ ಪಾಟೀಲರನ್ನು ಇಲ್ಲಿಗೆ ಚುನಾಯಿಸಿ ಕಳುಹಿಸಿದಂತಹ ರೈತರಿಗೆ ಅವರು ಹೆಚ್ಚು ಅನುಕೂಲಗಳನ್ನು ಕೊಡದೆ ಇಂತಹ ನಿರಾಶಾಯುತವಾದ ಕಾನೂನನ್ನು ಆಚರಣೆಗೆ ತರುತ್ತಿದ್ದಾರೆ. ಇದು ಅವರ ಮನೋಭಾವವನ್ನು ತೋರಿಸುತ್ತದೆ. ಈ ನುಗ್ರೀವಾಜ್ಞೆಯನ್ನು ಹೊರಡಿಸುವ ಅಗತ್ಯ ನಿಜವಾಗಿಯೂ ಇತ್ತೇ ಎಂಬುದನ್ನು ಮೊದಲು ಪ್ರಶ್ನಿಸಬೇಕಾಗಿದೆ. ಅಂತಹ ಕ್ಲಿಷ್ಟ ಸಮಸ್ಯೆಗಳೇನಾದರೂ ಇದ್ದುವೇ? ಮಾರ್ಚ್ 18ನೇ ತಾರೀಖು ಸಭೆ ಸೇರುವುದು ಸರ್ಕಾರಕ್ಕೆ ಗೊತ್ತಿತ್ತು. ಆದರೂ ಜರೂರಾಜ್ಞೆಯನ್ನು ಹೊರಡಿಸಿದ್ದಾರೆ. ಏಕೆಂದರೆ ಇದು ಸುಲಭವಾಗಿತ್ತು. ರಾಜಪ್ರಮುಖರ ಸಲಹೆಯಂತೆ ನುಗ್ರೀವಾಜ್ಞೆ ಹೊರಡಿಸಿದ್ದೇವೆ ಅದಕ್ಕೆ ಮಂಜೂರಾತಿ ಕೊಡಿ ಎಂದು ಕೇಳಲು ಈಗ ಅವಕಾಶವಾಗಿದೆ. ಅಲ್ಲದೆ ಈ ಮಸೂದೆಗೆ ಕಾರಣಕೊಟ್ಟಿರುವುದು ರೈತರ ಉದ್ಧಾರವಾಡಲು ಈ ಕ್ರಮ ತರಲಾಗಿದೆಎನ್ನುವುದು ಬರೀ ಒಂದು ಕುಂಟು ನೆಪ. ಇಂತಹ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಅಲ್ಲದೆ ಇದರಲ್ಲಿರುವ ಇನ್ನೊಂದು ವಿಷಯ ಇದೇ ಶಾಸನದ ಅನೇಕ ಕಲಮುಗಳನ್ನು ಹಳೆಯ ಮೈಸೂರಿಗೆ ಅನ್ವಯಿಸುವುದಕ್ಕೂ, ಕೊಡಗಿಗೆ ಅನ್ವಯಿಸುವುದಕ್ಕೂ ತಂದಿದ್ದಾರೆ. ಅದರಿಂದೇನೂ ಪ್ರಯೋಜನ ಬರುವುದಿಲ್ಲ. ಹೈದರಾಬಾದಿನಲ್ಲಿ ಕೂಡ ಈ ರೀತಿಯ ಕಾನೂನು ಇದೆ. ಅದು ಕೂಡ ಮುಂದುವರಿದಿದೆ. ಅದಕ್ಕೆ ಕೂಡ ಇದನ್ನ ಅನ್ವಯಿಸುವುದು ಸರಿಯಲ್ಲ. ಅಲ್ಲಿರುವಂತೆ ಹಾಗೆಯೇ ಮುಂದುವರಿಸಿಕೊಡುವುದು ಒಳ್ಳೆಯದು. ಇಷ್ಟು ಹೇಳಿ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

*ಶ್ರೀ ವಿ. ವಿ. ಪಾಟೀಲ್ (ಹಿರೇಕೆರೂರು).—ಅಧ್ಯಕ್ಷರೇ, ನಮ್ಮ ಕಂದಾಯ ಮಂತ್ರಿಗಳು ಕಾನೂನು ಏನು ಮಂಡಿಸಿದ್ದಾರೋ ಅದನ್ನು ನಾನು ಅನುಮೋದಿಸುತ್ತೇನೆ.

ಈಗ ತಾನೇ ನಮ್ಮ ವಿರೋಧಪಕ್ಷದ ನನ್ನ ಮಿತ್ರರಾದ ಶ್ರೀ ಗೋಪಾಲ ಗೌಡರು ಹಿಂದೆ ಮುಂಬಯಿ ಕಾಯಿದೆ ಮೇಲೆ ಮಾತನಾಡುತ್ತ ಒಂದುರೀತಿಯ ಶಂಕೆ ವ್ಯಕ್ತಪಡಿಸಿದರು. ಅದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಈಗ ಮೈಸೂರಿಗೆ ನಾಲ್ಕು ಭಾಗಗಳಿಂದ ಒಕ್ಕೂಟವಾದ ಮೇಲೆ ನಾಲ್ಕು ತರಹದ ಕಾಯಿದೆಗಳು ಬಂದಿವೆ. ಅದನ್ನೆಲ್ಲ ಒಂದೇರೀತಿಯ ಕಾಯಿದೆಯನ್ನಾಗಿ ಮಾಡುವುದಕ್ಕಾಗಿ ಈ ಮಸೂದೆ ಬಂದಿದೆ. ಇದರ ವಿಷಯವಾಗಿ ನನ್ನ ಮಿತ್ರರಾದ ಗೋಪಾಲಗೌಡರು ಬಹಳ ಸೊಗಸಾದ, ಇಂಪಾದ, ಮೈಸೂರು ಭಾಷೆಗೆ ತಕ್ಕಂತೆ ಬಹಳ ಚಾತುರ್ಯವಾದ ಶಬ್ದಗಳಿಂದ "ಕುಂಟುನೆಪ, ಅನಿವಾರ್ಯ, ಅನಿಷ್ಟ" ಇಂತಹ ಶಬ್ದಗಳಿಂದ ಭಾಷಣವನ್ನು ಮಾಡಿದರು. ನಾವೇನೋ ಹಿಂದುಳಿದವರು, ನಾವು ಸಹಜವಾಗಿಯೇ ಗಟ್ಟಿಯಾಗಿ ಮಾತನಾಡತಕ್ಕವರು. ಹೊಸದಾಗಿ ಬಂದಿರತಕ್ಕವರಿಗೆ ಇವರೇನೋ ಬಹಳ ಸೊಗಸಾಗಿ ಮಾತನಾಡಿದಂತೆ ಎನ್ನಿಸುತ್ತದೆ. ನಾನು ಇಷ್ಟೇ ಹೇಳುತ್ತೇನೆ. ಇಲ್ಲ ಕಾಂಗ್ರೆಸ್ ಪಕ್ಷದವರು ತಂದಿರುವ ಈ ಬೊಂಬಾಯಿ ಕಾಯಿದೆ ಏನಿದೆ ಅದರ ವಿಷಯವಾಗಿ ಭಯಪಡಲಕ್ಕೆ ಕಾರಣವಿಲ್ಲ. ಹಿಂದೂಸ್ಥಾನದಲ್ಲೆಲ್ಲಾ ಈ ಚೆನ್ನಿನ್ನ ಕಾಯಿದೆ ದೇಶದ ಎಲ್ಲ ಕಾಯಿದೆಗಳಿಗಿಂತಲೂ ಶ್ರೇಷ್ಠವಾಗಿದೆ ಎಂದು ಇದನ್ನು ಸೆಂಟ್ರಲ್ ಗೌರ್ನಮೆಂಟ್ ತಿದ್ದುಪಡಿಮಾಡಿ ಎಲ್ಲ ಪ್ರಾಂತ್ಯಗಳಿಗೂ ಹೀಗೆ ತರಬೇಕೆಂದು ಪ್ಲಾನಿಂಗ್ ಕಮಿಷನ್ ಅವರನ್ನು ಕೇಳುತಿದ್ದಾರೆ. ಇದರ ಉದ್ದೇಶ ಹೀಗಿದೆ. ಇಡೀ ದೇಶದೊಳಗೇ ಮುಂಬಯಿ ಕಾಯಿದೆಗೆ ಪ್ಲಾನಿಂಗ್ ಕಮಿಷ್ಟ ಅವರು ವಿಚಾರಮಾಡಿ ಸಮ್ಮತಿಸಿದ್ದಾರೆ.

(ಶ್ರೀ ವಿ. ಪಿ. ಪಾಟೀಲ್.)

4-30 P.M.

ಶ್ರೀಮಾನ್ ಗೋಪಾಲಗೌಡರಂಥ ಮಿತ್ರರು ಅನೇಕರು ವಿರೋಧಪಕ್ಷದಲ್ಲಿರುವುದು ಒಳ್ಳೆಯದು. ಉಗ್ರಗಾಮಿ ಪಕ್ಷದವರು ಬರಬಹುದು. ಗೋಪಾಲಗೌಡರು ಮುಂಬೈ ಶಾಸನದಂತೆಯೇ ಇಲ್ಲಿಯೂ ಮಾಡಬೇಕೆಂದು ಹೇಳಿದರು. ಅವರು ಅದಕ್ಕಿಂತ ಉತ್ತಮವಾದದ್ದನ್ನು ತಿಳಿಸಿದ್ದರೆ ಚೆನ್ನಾಗಿತ್ತು. ಪ್ರತಿಯೊಂದು ಕಾನೂನನ್ನು ಮಾಡುವಾಗಲೂ ಅದು ಯಾವಾಗಲೂ ನ್ಯೂಪರಿ ಪೂರ್ಣವಾಗಿರುವುದಿಲ್ಲವೆಂಬುದು ನಮಗೆ ಗೊತ್ತಿದೆ. ಮುಂಬೈ ಕಾಯಿದೆಯಲ್ಲಿಯೂ ಕೆಲವು ಕಡೆ ತಪ್ಪುಗಳಿವೆ; ತಿದ್ದುಪಡಿ ಮಾಡುವುದು ಬೇರೆ ಇದೆ. ನಭೆಯಲ್ಲಿ ಪುರೋಗಾಮಿ ಅಂದರೆ ಮುಂದೆಹೋಗುವ ಉಗ್ರಪಕ್ಷದವರಿದ್ದಾರೆ. ಅವರು ಏಕೆ ಮುಂಬೈ ಕಾಯಿದೆಗಿಂತಲೂ ಮುಂದೆ ಹೋಗುವುದಿಲ್ಲ? ಇವರುಗಳು ಮುಂಬೈ ಕಾಯಿದೆಯಂತೆ ಇರಬೇಕು, ಅದಕ್ಕಿಂತ ಕಡಮೆ ಇರಬಾರದು ಎಂದು ಹೇಳುತ್ತಾರೆಯೇ ಹೊರತು ಅದಕ್ಕಿಂತ ಇನ್ನೂ ಮುಂದೆ ಹೋಗುವುದಿಲ್ಲ. ಇದನ್ನ ನೋಡಿ ನನಗೆ ಬಹಳ ದುಃಖವಾಗುತ್ತದೆ. ನಾನು ಶ್ರೀ ಗೋಪಾಲಗೌಡರಿಗೂ ಮತ್ತು ವಿರೋಧಪಕ್ಷದಲ್ಲಿ ಮಾತನಾಡಿದವರಿಗೂ ಎರಡು ಮಾತುಗಳನ್ನು ಹೇಳುತ್ತೇನೆ. ಕಾಂಗ್ರೆಸ್‌ನವರು ಜನರ ಸೆಲುವಾಗಿ ತಳಮಳಗೊಳ್ಳುತ್ತಾರೆ; ಅವರು ಏನು ಕಾಯಿದೆಗಳನ್ನು ಮಾಡುವುದಕ್ಕೆ ಹತ್ತಿದ್ದಾರೆ, ಏನು ಕಾಯಿದೆಗಳನ್ನು ಮಾಡಿದ್ದಾರೆ, ಅವು lowest strata of society ಯಾರಿದ್ದಾರೆ ಅವರನ್ನು ಮುಂದಕ್ಕೆ ತರಬೇಕೆಂಬ ಉದ್ದೇಶದಿಂದ ಕೂಡಿದ್ದಾಗಿವೆ. ಗಾಂಧಿಯವರ ತತ್ವಗಳನ್ನನುಸರಿಸಿಕೊಂಡು ಕೆಳಮಟ್ಟದಲ್ಲಿರುವವರನ್ನು ಉದ್ಧಾರವಾಡಬೇಕೆಂದು ಪ್ರತಿಯೊಬ್ಬರೂ ಶ್ರಮಿಸುತ್ತಿದ್ದೇವೆ. ಕಾಂಗ್ರೆಸ್ ಒಳಗಿರಲಿ, ಸರ್ಕಾರದ ಆಡಳಿತವನ್ನು ನಡೆಸುತ್ತಿರಲಿ, ಅಥವ ವಿನೋಬಭಾವೆಯವರಂತೆ ಹೊರಗಡೆ ಇರಲಿ lowest class of society ಯನ್ನು ಹೇಗೆ ಮೇಲಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ನಮ್ಮ ಕಾಯಿದೆಗಳು, ನಮ್ಮ ಬೇರೆ activities ನಡೆದಿವೆ. ಕಮ್ಯೂನಿಸ್ಟರು ಇವತ್ತಿನ ದಿವಸ ಭಂಗಾರದ ಹೊಗೆ ಪ್ರತಿಯೊಂದು ಒಕ್ಕಲಿಗರ ಮನೆಯೊಳಗೆ, ಕೂಲಿ ಕಾರರ ಮನೆಯೊಳಗೆ ಏಳುವಂತೆ ಮಾಡುತ್ತೇವೆ ಎಂದರೆ ಹಾಗೆ ಮಾಡಲು ಅವರಿಗೆ ಸಾಧ್ಯವಿಲ್ಲ ವೆಂದು ಹೇಳುತ್ತೇನೆ. ಇವತ್ತು ಹಿಂದೂಸ್ಥಾನದ ಉದ್ಧಾರವಾಗಬೇಕಾದರೆ, ಉತ್ತಮವಾದ ಮಹಾತ್ಮ ಗಾಂಧಿ ತತ್ವಗಳಾದ non-violence, ಮುಂತಾದುವನ್ನು ಅನುಸರಿಸಿ ಎಲ್ಲ ಕ್ಷೇತ್ರಗಳಲ್ಲಿಯೂ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮಹಾತ್ಮ ಗಾಂಧಿಯವರು ಹಿಂದೂಸ್ಥಾನದ ಎಲ್ಲ ಜನಗಳಿಗೂ ಅನುಕೂಲಗಳನ್ನು ಕಲ್ಪಿಸಬೇಕೆಂದು ಮಾಡಿದರು. ಇವೊತ್ತು ನಾವು ಬಿಲ್‌ಗಳನ್ನು ಪಾಸ್‌ಮಾಡಿದ್ದೇವೆ; ಆಕ್ಟ್ ಅದೆ. ನಾವು ಮುಂದುವರಿಯುತ್ತಿದ್ದೇವೆ. ಮುಂಬೈನಲ್ಲಿರುವ ಭೂ ಸ್ವತ್ತಿನ ವಿಷಯದಲ್ಲಾಗಲಿ, ಇತರ ವಿಷಯಗಳಲ್ಲಾಗಲಿ, ಪ್ರತಿಗಾಮಿಗಳಾಗಿದ್ದೇವೆನ್ನುವುದನ್ನು ದಯಮಾಡಿ ಗೋಪಾಲ ಗೌಡರೂ ಮತ್ತು ವಿರೋಧಪಕ್ಷದವರೂ ತೆಗೆದು ಹಾಕಲಿಕ್ಕೇ ಬೇಕು. ನಾವು ಪ್ರತಿಗಾಮಿಗಳಾಗಿದ್ದೇವೆಂದು ಇವರು ಹೇಳುತ್ತಾರೆ, ಆಷ್ಟೆ. ಕಾಂಗ್ರೆಸ್ ಹೈಕಮ್ಯಾಂಡ್ ಇದೆ. ಅವರಿಗೆ ಈ ಪ್ರತಿಗಾಮಿ ಥೋರಣ್ ಇದೆ ಎಂದರೆ, ಹಾಗೆ ಇರುವುದಾದರೆ, ಅವರು ಮುನ್ನಡೆಯುದಕ್ಕೆ ಸಾಧ್ಯವಿಲ್ಲವೆಂಬುದನ್ನು ತಿಳಿಯಬೇಕು.

ಶ್ರೀಮಾನ್ ಕೆ. ಪಟ್ಟಾಭಿರಾಮ್‌ರವರು ನನಗೆ ಮಾತನಾಡಿ ಎಂದು ಹೇಳಿದರು. ನನಗೇನೋ ಮಾತನಾಡುವುದರ ಅವಶ್ಯಕತೆ ಕಾಣಲಿಲ್ಲ. ಆದರೂ ಕೆಲವು ವಿಷಯಗಳನ್ನು ತಿಳಿಸಲು ನಿಂತಿದ್ದೇನೆ. ಎದುರು ಪಕ್ಷದವರು 'ಹಿಂದೆ ಹೋಗುತ್ತೀರಿ' ಎಂದ ಮಾತು ಏನಿದೆ ಅದು ಎಂದೆಂದಿಗೂ ಸಾಧ್ಯವಿಲ್ಲ. ಯಾವಾಗಲೂ ಒಂದೇರೀತಿ ಇರಬೇಕೆಂದು ಮಾಡಿದ್ದೇವೆ. ಬೊಂಬಾಯಿಯವರು ಕಾಯಿದೆ ಮಾಡಿದ್ದಾರೆ. ಅದನ್ನು ಹಿಂದಕ್ಕೆ ತೆಗೆಯುವಂತೆ ಮಾಡುವುದು ಸಾಧ್ಯವಿಲ್ಲ. ಆದರೆ ಅದರಲ್ಲಿ ತಿದ್ದುಪಡಿಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಅದರಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅದನ್ನು ಮಾತ್ರ ನರಿಪಡಿಸುತ್ತೇವೆಯೇ ಹೊರತು ಹಿಂದೆ establish ಆಗಿರುವ rights ಏನಿದೆ ಅವನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ. ಐದುಪಟ್ಟು ಗೇಣಿ ಅಥವಾ 20 ರಿಂದ 200 ಪಟ್ಟು ಕಂದಾಯ ಜಮೀನಿನ ಬಗ್ಗೆದಿ ಇರಬೇಕೆಂದು ಮಾಡಿದ್ದಾರೆ. ಇದು ಹಿಂದೆಯೇ ಆಗಿದೆ. Tiller of the soil ಎಂದಿದೆ. ಇದರಲ್ಲಿ ಕೆಲವು fundamentals ಬರುತ್ತವೆ. ಜಮೀನಿನ ಬೆಲೆ ಒಂದೊಂದು ಸ್ಥಳಕ್ಕೂ ಹೆಚ್ಚು ಕಡಮೆಯಾಗ ಬಹುದು. ಆದರೆ ಈಗ ಆಗಿರುವುದು ಏನಿದೆ, ಮುಂಬೈ ಕಾಯಿದೆ ಏನಿದೆ ಅದನ್ನು ಹಿಂದೆ ಒಯ್ಯುತ್ತಾರೆಂದು ಯಾರೂ ತಿಳಿದುಕೊಳ್ಳಬಾರದೆಂದು ಹೇಳುತ್ತೇನೆ.

ಪ್ರತಿಯೊಂದು ದೃಷ್ಟಿಯಲ್ಲಿಯೂ ಕೆಲಕೆಲವು ಅನಿವಾರ್ಯಗಳು ಬರುತ್ತವೆ. ನಾವು ಮುಂಬೈನಲ್ಲಿ ಎಲ್ಲ ವಿಷಯಗಳನ್ನೂ ವಿಚಾರಮಾಡಿ Tenancy ಕಾಯಿದೆ ಏನಿದೆ ಅದು ಹಿಂದೆ ಹಾಕತಕ್ಕದ್ದಲ್ಲ, ಅದು ಇರಬೇಕು ಎಂದು ತರಾವು ಪಾಸ್‌ಮಾಡಿದ್ದೇವೆ. ಅಂದಮೇಲೆ ಕಂದಾಯ ಮಂತ್ರಿಗಳ ಬಗ್ಗೆ ನೀವು ಏನು ಅಂದಿರೋ ಅದು ನನಗೆ ತಿಳಿಯದು, ಮಂತ್ರಿಗಳೇ ಆಗಲಿ, ಯಾರೇ ಆಗಲಿ ಪ್ರತಿಗಾಮಿ ಥೋರಣ್ ಇದ್ದವರು, ಜಮೀನ್ದಾರರಾಗಲಿ, ಕ್ಯಾಪಿಟಲಿಸ್ಟ್ ಆಗಲಿ, ಯಾರೇ ಆಗಲಿ, ಇವರುಗಳು organise ಮಾಡಿಕೊಂಡಿದ್ದಾರೆ; ಇಂಥ ಜನರಿಗೆ ಬೆಂಬಲ ಕೊಡುತ್ತಾರೆ, ಎಂದು ತಿಳಿದುಕೊಳ್ಳುವುದು ತಪ್ಪು. ಏಕೆಂದರೆ 10-15 ವರ್ಷಗಳಿಂದ ನಾವು ಭೂಮಿ ಉಳುವವನಿಗೇ ಇರಬೇಕೆಂದು ಹೋರಾಡಿದ್ದೇವೆ. ಅದೂ ಅಲ್ಲದೆ ಈ ಮಸೂದೆಯು ಸೆಲೆಕ್ಟ್ ಕಮಿಟಿಯಲ್ಲಿ unanimous ಆಗಿ ಪಾಸ್ ಆಗದೆ. ಈ ಮಸೂದೆಯು ಬಂದ ಸಂದರ್ಭದಲ್ಲಿ ಯಾರೋ ಒಬ್ಬರು ಹೊರಗೆ ಹೋದರು ಎಂಬ ಬಗ್ಗೆ ಪ್ರಚಾರ ಮಾಡುವುದು ತಪ್ಪು. Tenancy ಕಾಯಿದೆಯನ್ನು ಪಾಸ್ ಮಾಡಬೇಕಾದರೆ ಕೆಲವರು ಮತ ವೀಯಬಾರದೆಂದು ಹೊರಗೆ ಬಂದರೆಂದು ಹೇಳಿದರು. ಹೊರಗಡೆ ಕಮ್ಯೂನಿಸ್ಟ್, ಸೋಷಿಯಲಿಸ್ಟ್ ಮುಂತಾಗಿ ಪಕ್ಷಗಳನ್ನು ಕಟ್ಟಿಕೊಂಡು ಹೊಡೆದಾಡುತ್ತಾರೆ. ಆದರೆ ಕಾಂಗ್ರೆಸ್ ಪಕ್ಷದ ವಿಷಯವನ್ನು ತೆಗೆದುಕೊಂಡರೆ ಇವರೆಲ್ಲರಿಗಿಂತ ಹೆಚ್ಚಾಗಿ, ದೀರ್ಘವಾಗಿ ನಾವುಗಳು ಹೊಡೆದಾಡುತ್ತೇವೆ. ಕಮ್ಯೂನಿಸ್ಟರು ಏಕೆ, ಸೋಷಿಯಲಿಸ್ಟರು ಏಕೆ, ನಾವು ಅವರಿಗಿಂತ ಹೆಚ್ಚಾಗಿ ತಲೆ ಒಡೆದುಕೊಳ್ಳುವಹಾಗೆ ಹೊಡೆದಾಡುತ್ತೇವೆ. ಅನಂತರ ಒಂದು ಒಮ್ಮತಕ್ಕೆ ಬರುತ್ತೇವೆ. Democracy principle ಎಂದು ಪಾಶ್ಚಾತ್ಯರಿಂದ ಬಂದಿದೆ. ಅದರ ಪ್ರಕಾರ Constitution ಮಾಡಿಕೊಂಡಿದ್ದೇವೆ. ಇಲ್ಲಿ ಬಂದು ಕೂಡುತ್ತೇವೆ. ಆದರೆ ನಾವು ಇಂಥ ವಿಷಯಗಳನ್ನು ಕೂಲಂಕಷವಾಗಿ ವಿಚಾರಮಾಡಿ, ಕೆಲವರ ಅಭಿಪ್ರಾಯ ಭಿನ್ನವಿಸಿತ್ತು ಎಂದರೆ ಅಂಥದನ್ನು ಮಾಡುವುದಿಲ್ಲವೆಂದು ಹೇಳುತ್ತೇವೆ. ಕಡೆಗೆ ಸೆಲೆಕ್ಟ್ ಕಮಿಟಿಯಾದ ಮೇಲೆ, ಅಲ್ಲಿ ತಿದ್ದು ಪಡಿಮಾಡಿ ಅವರು ಕುಳಿತುಕೊಂಡು ಮಾತು

ಗಳನ್ನು ಬದಲಾಯಿಸುತ್ತಾರೆ. ಕೆಲವು ಸದಸ್ಯರು ಪ್ರತಿಭಟನೆಮಾಡಿ ಎದ್ದು ಹೋದರೆ, ಅವರಿಗೆ majority ಇಲ್ಲದೆ ಇರಬಹುದು. ಆದರೂ ನಾವು ಅವರು ಹಾಗೆ ಮಾಡಲು ಕಾರಣವೇನೆಂದು ತಿಳಿದು ಕೊಂಡು ಕೆಲವನ್ನು ತಿದ್ದುಪಡಿ ಮಾಡಿದ್ದೇವೆ. ಅನಂತರ ಅದು unanimous ಆಗಿ ಪಾಸ್ ಆಗಿದೆ. ನಾವು ಗಳು ಹೋಗುವವರಿದ್ದೇವೆ. ಮುಂದೆ ಬರುವವರು ಕೆಳಗಿನ ವರ್ಗದವರ ಸಲುವಾಗಿ ನಮಗಿಂತ ಹೆಚ್ಚಿಗೆ 24 ಘಂಟೆಯೂ ದುಡಿಯುವವರು ಆಗಿರಬಹುದು. ಆದರೆ ಅವರುಗಳು, ಮತ್ತು ಈಗ ಮಾಡಬೇಕೆಂದಿರುವ ಸಮಿತಿಯವರು ಈಗ ಮಾಡಿರುವುದಕ್ಕಿಂತ ಹೆಚ್ಚಿಗೆ ಮಾಡಿ ಮಾರ್ಗ ತೋರಿಸುವುದಕ್ಕೆ ಬರಲಿಕ್ಕಿಲ್ಲ ಅನ್ನಿಸುತ್ತದೆ.

ಇನ್ನು ಈಗ ಸರಕಾರದವರು ಯಾವ ಸಮಿತಿಯನ್ನು ನೇಮಿಸಬೇಕೆಂದಿದ್ದಾರೋ ಅದರಲ್ಲಿ lower class of societyಗೆ ಹೇಗೆ ಲಾಭವಾದೀತು ಎಂಬುದನ್ನು ಗಮನಿಸತಕ್ಕಂಥವರನ್ನೇ ನೇಮಿಸುತ್ತಾರೆ, ಅಂತಹವರೇ ಅದರಲ್ಲಿ ಇರುತ್ತಾರೆ ಎಂದು ನಾನು ಅಗ್ನಿ ನಂಬುತ್ತೇನೆ. ಈಗ ಕಾಂಗ್ರೆಸ್ ಕ್ಯಾಬಿನೆಟ್ ಇದೆ, ಇದಕ್ಕಿಂತ ಚೆಲೋ ಕ್ಯಾಬಿನೆಟ್ ಬೇರೆ ಯಾವುದು ಇರಲಿಕ್ಕೆ ಬರುವುದಿಲ್ಲ ಎಂದು ಅನ್ನಿಸುತ್ತದೆ. ಏಕೆಂದರೆ ಇದರಲ್ಲಿ ಕ್ಯಾಪಿಟಲಿಸ್ಟ್ ಯಾರೂ ಇದ್ದದ್ದು ಕಾಣುವುದಿಲ್ಲ. ಲೆಕ್ಕ ತೆಗೆದುಕೊಂಡರೆ ಎಲ್ಲರೂ ಕೆಳದರ್ಜೆಯವರೇ ಇದ್ದಾರೆ. ಮುಂದಿನ ಕ್ಯಾಬಿನೆಟ್ ಹೇಗಾಗುತ್ತದೆಯೋ ಗೊತ್ತಿಲ್ಲ. ಮುಂದೂ ಸಹ ಇದೇ ರೀತಿ ಇರುತ್ತದೆ, ಡಿಟೀರಿಯೊರೇಟ್ ಆಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಮತ್ತೊಂದು ಮಾತು. ಈ ಹಿಂದೂಸ್ಥಾನದಲ್ಲಿ ಹೊಸರಾಜ್ಯ ಕಟ್ಟಬೇಕಾದರೆ ಶ್ರೀಮಂತರಾಗಲಿ, ಬಡವರಾಗಲಿ, ಮಧ್ಯಮವರ್ಗದವರಾಗಲಿ ಯಾರನ್ನೂ ಕೂಡ ಉಪವಾಸಬೀಳತಕ್ಕಂತ ಸ್ಥಿತಿಗೆ ಎಂದೆಂದಿಗೂ ತರುವುದಿಲ್ಲ. ಎಂದ ಮೇಲೆ ಇವತ್ತಿನ ದಿವಸ ನಾವು ಯಾವುದನ್ನೇ ಮಾಡಲಿ ಅಹಿಂಸಾ ಮಾರ್ಗದಿಂದ ಮಾಡಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಕಾಂಗ್ರೆಸಿನವರ ಇಚ್ಛೆ, ವಿರೋಧಪಕ್ಷದವರ ಇಚ್ಛೆ ಎಲ್ಲರ ಇಚ್ಛೆಯೂ ಕೂಡ lower class of societyಗೆ ಹಿತವಾಗಬೇಕು ಎಂದೇ ಇದೆ. ಇದನ್ನು ಅಹಿಂಸಾ ಮಾರ್ಗದಿಂದ ಮಾಡಬೇಕು. ಅದೇ ಚೆಲೋ ಮಾರ್ಗ ಎಂದು ನಮಗೆ ಅನುಭವದಿಂದಗೊತ್ತಾಗಿದೆ. ಹಿಂಸಾಮಾರ್ಗವನ್ನು ನುರಿಸಿ ಕಾಯಿದೆ ಮಾಡುವುದು ಕಠಿಣವಿದೆ. ಈ ರೀತಿ ಮಾಡುವಂಥ ಪಕ್ಷಗಳು ನದ್ದಕ್ಕೆ ಬೇಡವೇ ಬೇಡ ಎಂದು ಹೇಳುತ್ತೇನೆ. ಅಹಿಂಸಾತ್ಮಕ ಮಾರ್ಗದಿಂದ ಬಡವರ ಹಿತವನ್ನು ಮಾಡುವಂತಹ ಕಾಯಿದೆಗಳನ್ನು ನಿರ್ಮಾಣ ಮಾಡತಕ್ಕ ಜನ ಇದ್ದರೆ ಬಹಳ ಚೆಲೋ ಕೆಲಸ ಆಗುತ್ತದೆ ಎಂದು ಅನ್ನಿಸುತ್ತದೆ.

ಶ್ರೀ ಗೋಪಾಲಗೌಡರು ರಸೀದಿ ಪಾವತಿ ಮಾಡುವುದಿಲ್ಲ. ಎಂದು ಹೇಳಿದರು. ಅಂಥ ಪರಿಸ್ಥಿತಿ ನಮಗೆ ಗೊತ್ತೇ ಇಲ್ಲದ ಮಾತ . ರಸೀದಿ ಕೊಡದಿದ್ದರೆ ಅಂತಹವನ ಹಿತರಕ್ಷಣೆ ನಮ್ಮಲ್ಲಿ ಮಾಡಿದ್ದೇವೆ. ಆದ್ದರಿಂದ ಸಮಿತಿಯವರು ಅದನ್ನೆಲ್ಲಾ ನೋಡುತ್ತಾರೆ, ಅಭ್ಯಾಸ ಮಾಡುತ್ತಾರೆ. ಎಲ್ಲೆಲ್ಲಿ ಏನೇನು ಉತ್ತಮವಾದದ್ದು ಇದೆ ಎಂಬುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಎಲ್ಲಿ ಯಾವುದು ಚೆಲೋ, ಯಾವುದು ಚೆಲೋ ಇಲ್ಲ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಎಂದ ಮೇಲೆ ಕೆಲವರ ಹೆದರಿಕೆ ಏನಿದೆ ಅದಕ್ಕೆ ಏನೇನೂ ಅವಕಾಶವಿಲ್ಲ. ಆದ್ದರಿಂದ ಈಗ ಈ ಯಾವ ಬಿಲ್‌ನ್ನು ತಂದಿದ್ದಾರೋ ಇದಕ್ಕೆ ವಿರೋಧ ಮಾಡದೆ ಇದನ್ನು ಒಪ್ಪಿಕೊಂಡು ಅನುಮತಿ ಕೊಡಬೇಕೆಂದು ಹೇಳುತ್ತೇನೆ. ಇನ್ನೆಲ್ಲಾ ಎರಡು ಮೂರು ತಿಂಗಳಿಗೋಸ್ಕರ ಸಮಿತಿ ಏಕೆ ಮಾಡಬೇಕು ಎಂದು ಕೆಲವರು ಹೇಳಬಹುದು. ಎಷ್ಟೇ ದಿನ ಆಗಲಿ ಎಲ್ಲರಿಗೂ ಅನುಕೂಲವಾದ ವಾತಾವರಣ ಉಂಟಾಗುವಂತೆ ಏಕೆ ಮಾಡಬಾರದು? ಮುಂಬೈ, ಹೈದರಾಬಾದು, ಮೈಸೂರು ಈ ಪ್ರದೇಶಗಳೆಲ್ಲಾ ಈಗ ಒಟ್ಟಾಗಿವೆ. ಇಂಥ ಸಂದರ್ಭದಲ್ಲಿ ಒಂದು ಸಮಾಧಾನಕರವಾದ ಸನ್ನಿವೇಶ ಕಲ್ಪಿಸಬೇಕಾದದ್ದು ಅತ್ಯಗತ್ಯ. ಅದರಲ್ಲಿ ಅಡ್ಡಿ ಏನೂ ಇಲ್ಲ. ಇದನ್ನು ತಂದ ಮಾತ್ರಕ್ಕೇ ಶ್ರೀಮಂತರು ಯಾರಿದ್ದಾರೋ ಅವರು ಬಿಕ್ಕೆ ಬೇಡಲಿಕೆ ಹೋಗುವಂಥ ಪರಿಸ್ಥಿತಿ ಉಂಟಾಗುವುದಿಲ್ಲ. ಆ ರೀತಿ ಆದದ್ದೇ ಆದರೆ ಜನರ ಹೊಟ್ಟೆ ಒಳಗೆ ಉರಿ ಬೀಳುವ ಪರಿಸ್ಥಿತಿ ಬರುತ್ತದೆ. ಅಂಥ ಸ್ಥಿತಿ ಎಂದೆಂದಿಗೂ ಬರುವುದಿಲ್ಲ. ಅವರಿಗೆ ಎಷ್ಟು ಜುಮೀನು ಉಳಿಯಬೇಕೋ ಅಷ್ಟು ಉಳಿಯುತ್ತದೆ, ಅವರ ಹಿತ ರಕ್ಷಣೆ ಆಗಿಯೇ ಆಗುತ್ತದೆ. ಅದನ್ನು ತಪ್ಪಿಸಿ, ಬೇರೊಂದು ರೀತಿಯಲ್ಲಿ ಮಾಡುತ್ತೇವೆ ಎನ್ನುವುದಾದರೆ ಅದು ಇವೊತ್ತು ಸಾಧ್ಯವಿಲ್ಲ. ಹಿಂದೂಸ್ಥಾನದಲ್ಲಿ ಇಂಥ ಕಾಯಿದೆ ಏನಿದೆಯೋ. ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕು. ಕರ್ನಾಟಕದವರಾಗಲಿ, ಮೈಸೂರಿನವರಾಗಲಿ—ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇದು ಬಡವರ ಸಮಸ್ಯೆ, ಈ ಬಡವರ ಸಮಸ್ಯೆಯನ್ನು ಹೇಗೆ ಬಿಡಿಸಬೇಕು ಎಂಬ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಾಗಬೇಕು. ಬಡವರಿಗೆ ಹಿತವಾಗುವ ಕೆಲಸಗಳನ್ನು ತೃಪ್ತಿಕರವಾದ ರೀತಿಯಲ್ಲಿ ಬಗೆಹರಿಸಬೇಕೆಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಕಂದಾಯ ಮಂತ್ರಿಗಳು ತಂದಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತೇನೆ. ಷಿಕ್ಮೆದಾರರಿಗೆ ಸಂಬಂಧಪಡತಕ್ಕ ಈ ವಿಚಾರದಲ್ಲಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರದವರು ಹತ್ತು ವರ್ಷಗಳಿಂದ ಒಂದೇನಮ ಬಿಲ್ಲು ತರುತ್ತಾ ಇದ್ದಾರೆ. ಅದಕ್ಕೆ ಈ ಕಡೆ ನಮ್ಮ ಪಾರ್ಟಿಯವರು ಒಂದೇ ನಮನೆ ಅದಷ್ಟು ಜಾಗ್ರತೆ ಈ ಭೂ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಒತ್ತಾಯ ಮಾಡುತ್ತಾ ಇದ್ದಾರೆ. ಇದಕ್ಕೆ ಕೇಂದ್ರ ಸರಕಾರದ ಪ್ಲಾನಿಂಗ್ ಕಮಿಷನ್ ಅವರ ಒತ್ತಾಯ ಕೂಡ ಬರುತ್ತಾ ಇದೆ ಎಂದು ಮಂತ್ರಿಗಳು ಹೇಳುತ್ತಾರೆ. ಹಿಂದೆ ಸುಮಾರು ಎಂಟು ಹತ್ತುಸಾರಿ ಈ ಬಿಲ್ಲು ಬಂದು ಹಿಂದಕ್ಕೆ ಹೋಗಿ ಮತ್ತೆ ಒಂದು ರೂಪಕ್ಕೆ ಬರಿತ್ತು. ಈಗ ಮತ್ತೆ ಇದನ್ನು ತಿದ್ದುಪಡಿ ಮಾಡುವುದಕ್ಕೆ ತಂದಿದ್ದಾರೆ. ಇದರ ಉದ್ದೇಶ ಏನಿತ್ತು ಎಂಬುದು ಅರ್ಥವಾಗುವುದಿಲ್ಲ. ಏಕೆಂದರೆ ಹಿಂದೆ ಕಾನೂನು ತಂದಾಗ್ಗೆ ಈ ಇನಾಂತಿಗೆ ಮತ್ತು ಜಹಗೀರ್‌ದಾರರಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಿ, ಶ್ಯಂಗೇರಿ ಮುಂತಾದುವಕ್ಕೆಲ್ಲಾ ಬೇರೆಬೇರೆ ಕಾನೂನುಗಳನ್ನು ತರಬೇಕಾದರೆ ಮೂರು ವರ್ಷ ಬೇಕಾಯಿತು. ಈಗ ಈ ಮಸೂದೆತಂದಿರತಕ್ಕ ಮಾನ್ಯ ರೆವೆನ್ಯೂ ಮಂತ್ರಿಗಳು ತಾವು ಬೊಂಬಾಯಿ ಕರ್ನಾಟಕಕ್ಕೆ ಹೋಗಿ ಅಲ್ಲಿನ ಸದಸ್ಯರನ್ನೆಲ್ಲಾ ಕರೆಸಿ ವಿಾಟಿಂಗ್ ಮಾಡಿ ಈ ತೀರ್ಮಾನಕ್ಕೆ ಬಂದುದಾಗಿ ಹೇಳಿದರು. ಅದೇ ರೀತಿ ಮೈಸೂರಿನಲ್ಲಿ ಯಾರನ್ನು ಕೇಳಿದರು? ಕಳಮಟ್ಟದಲ್ಲಿರುವ ಜನರೇನಾದರೂ ಬಂದು ಇದನ್ನು ತಿದ್ದುಪಡಿ ಮಾಡಬೇಕೆಂದು ಕೇಳಿದರೆ? ಅಥವಾ ಶಾಸನ ಸಭಾಸದಸ್ಯರು ಯಾರಾದರೂ ಡೆಪ್ಯುಟೇಷನ್ ಹೋಗಿ ತಿದ್ದುಪಡಿ ಮಾಡಬೇಕೆಂದು ಹೇಳಿದರೆ? ಎಂದು ಪ್ರಶ್ನೆ ಹಾಕುತ್ತೇನೆ. ಅದು ಯಾವುದೂ ಇಲ್ಲದೆಯೇ ಅವರು ಎಲ್ಲ ಕಡೆಗೂ ಅನ್ವಯಿಸುವಂಥ ಯೂನಿಫಾರಂ ಲೆಜಿಸ್ಲೇಷನ್ ತಂದಿರುವುದರ ಉದ್ದೇಶ

(ಶ್ರೀ ಬಿ. ಹುಚ್ಚೇಗೌಡ)

ವೇನು ? ಹಾಗೆ ತರಬೇಕಾದರೆ ಜಾರಿಯಲ್ಲರುವುದನ್ನು ಸಸ್ಪೆಂಡ್ ಮಾಡಿ ಇದನ್ನು ತರಬೇಕಾದ ಅವಶ್ಯಕತೆಯಿದೆಯೆ ? ಶ್ರೀ ಪಾಟೀಲರು ಬೊಂಬಾಯಿನಲ್ಲಿ ಬಹಳ ಚೆನ್ನಾಗಿದೆಯೆಂದು ಒಪ್ಪಿಕೊಳ್ಳುತ್ತಾರೆಂದು ಹೇಳಿದರು ; ಚೆನ್ನಾಗಿದ್ದರೆ ಒಪ್ಪಿಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಆದರೆ ಮೈಸೂರಿಗೆ ಬಂದ ಮೇಲೆ ಅವರೂ ಕರಪ್ಟ್ ಆಗಿದ್ದಾರೆಂದು ಕಾಣುತ್ತದೆ. ಮೈಸೂರಿನಲ್ಲಿ ಯಾವ ವಿಧವಾಗಿ ಪಾನನಿರೋಧ ಜಾರಿಗೆ ಬಂದಿದೆಯೋ ಅದೇ ರೀತಿ ಬೊಂಬಾಯಿ ಕರ್ನಾಟಕದಲ್ಲೂ ಮಾಡಬೇಕೆಂದು ಕಾಂಗ್ರೆಸ್ ಪಕ್ಷ ಸ್ವಲ್ಪಮಟ್ಟಿಗೆ ಅಭ್ಯಾಸ ಮಾಡುತ್ತಿರುವ ಹಾಗೆ ಕಾಣುತ್ತದೆ. ಇದೇ ರೀತಿ ಅನೇಕ ಕಾನೂನುಗಳ ವಿಚಾರದಲ್ಲಿ ನಡೆಯುತ್ತಿರುವಾಗ ಇದು ಸರಿಯಲ್ಲವೆಂದು ಹೇಳುವುದಕ್ಕೆ ಅಡ್ಡಿಯಿಲ್ಲ. ಜನರ ಜೀವನ ಮಟ್ಟ ಹೆಚ್ಚಿಸಬೇಕಾದರೆ ಮತ್ತು ಅವರ ಹಕ್ಕು ಬಾಧ್ಯತೆಗೆ ಮನ್ನಣೆ ನೀಡಬೇಕಾಗಿದ್ದರೆ ನಾವು ಯಾವಾಗಲೂ ಹಿಂದೆಗೆಯುವುದಕ್ಕಾಗುವುದಿಲ್ಲ. ಅದನ್ನು ಬಿಟ್ಟು ಮೈಸೂರಿನಲ್ಲರುವ ಪಾನನಿರೋಧ ವ್ಯವಸ್ಥೆಯನ್ನು ಇನ್ನೊಂದು ಕಡೆಯೂ ಜಾರಿಗೆ ತಂದರೆ ನೀತಿಯ ಮಟ್ಟ ಉತ್ತಮವಾಗುತ್ತದೆಂದು ಹೇಳಿದರೆ ಹಾಸ್ಯಾಸ್ಪದ, ಎಲ್ಲರೂ ನಗುತ್ತಾರೆ; ಇದು ಪ್ರಪಂಚಕ್ಕೇ ಗೊತ್ತು. ಒಂದು ಕಡೆಯಿಂದ ಹೊರಟರೆ ಕೋಲಾರದಲ್ಲಿ ಕುಡಿಯುವಹಾಗಿಲ್ಲ, ಬೆಂಗಳೂರಲ್ಲಿ ಕುಡಿಯಬಹುದು, ತುಮಕೂರಿನಲ್ಲಿ ಅವಕಾಶವಿಲ್ಲ, ಅರಸೀಕೆರೆಯಲ್ಲಿ ಕುಡಿಯಬಹುದು, ಅದೇ ಮುಂದೆ ಹೋಗಿ ಕಡೂರಿನಲ್ಲಿ ಕುಡಿದರೆ ಜೈಲಿಗೆ ಹಾಕುತ್ತಾರೆ. ಇಂಥ ಕಾನೂನು ಕಾಂಗ್ರೆಸ್ ಸರ್ಕಾರದಲ್ಲಿದೆ. ಅನುಭವದ ಮೇಲೆ ತಿದ್ದುಪಡಿ ತರುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮೂರು ತಿಂಗಳು ನೋಡಿ ಬೇಕಾದರೆ ತಿದ್ದುಪಡಿ ಮಾಡಬಹುದೆಂದು ಹೇಳುತ್ತಾರೆ. ಜಿಲ್ಲಾ ಬೋರ್ಡ್ ಆಕ್ಟ್ ಪಾಸಾದುದು 1950ನೆಯ ಇಸವಿಯಲ್ಲಿ; 1952ರಲ್ಲಿ ಅದು ಜಾರಿಗೆ ಬಂತು. ಅನಂತರ ಮೂರು ತಿದ್ದುಪಡಿಗಳಾದರೂ ಈ ದಿವಸನದವರೆಗೂ ಅದರ ಪ್ರಕಾರ ಜನಾವಣೆ ನಡೆಸಿ ಜಿಲ್ಲಾ ಬೋರ್ಡ್ ಸ್ಥಾಪಿರುವುದಿಲ್ಲ. ಏಪ್ರಿಲ್ ಒಂದರಿಂದ ಜಾರಿಗೆ ಬರುವುದಕ್ಕೆ ಈಗಾಗಲೇ ಯಾವ ಅನುಭವದಿಂದ ತಿದ್ದುಪಡಿ ಮಾಡುತ್ತಾರೋ ಗೊತ್ತಿಲ್ಲ. ಇದೇ ಮಂತ್ರಿಗಳು ಬೊಂಬಾಯಿ ಶಾಸನ ಸಭೆಯಲ್ಲಿದ್ದಾಗ ಅವರ ವಾಕ್ಚರಿ ಹೇಗಿತ್ತೋ ಅದು ಇಲ್ಲಿಗೆ ಬಂದ ಮೇಲೆ ಬದಲಾಯಿಸಿ ಅಭಿಪ್ರಾಯ ಭೇದವುಂಟಾಗಲು ಕಾರಣವಾದರೂ ಏನು ? ಮಾರ್ಚಿ 18 ರಿಂದ ಈ ಅಧಿವೇಶನವಿರುವಾಗ ಫೆಬ್ರುವರಿ 18 ರಲ್ಲೇ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಅವಶ್ಯಕತೆ ಯಾದರೂ ಏನಿತ್ತು ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಇಂಥ ಒಂದು ನಿನ್ನವೇಶದಲ್ಲಿ ಹಕ್ಕು ಬಾಧ್ಯತೆಯನ್ನು ಪೊಟಕುಮಾಡುವುದಕ್ಕಾಗಿ ಒಂದು ಆರ್ಡಿನೆನ್ಸ್ ಹೊರಡಿಸಿದ್ದಾರೆ. ಅದನ್ನು ಯಾವ ಸಂದರ್ಭದಲ್ಲಿ ಹೇಗೆ ಉಪಯೋಗಿಸಿದ್ದಾರೆಂಬುದನ್ನು ಶ್ರೀ ಪಟ್ಟಾಭಿರಾಮರಾವರು ಚೆನ್ನಾಗಿ ವರ್ಣಿಸಿದ್ದಾರೆ. ಯಾವ ದೃಷ್ಟಿಕೋಣದಿಂದ ಈ ರೀತಿ ಮಾಡಿದ್ದಾರೆಂಬುದನ್ನು ನೋಡಬೇಕು. ನಾವು ಪ್ರತಿಗಾಮಿಗಳಲ್ಲ, ಪುರೋಗಾಮಿಗಳು ಎಂದು ಹೇಳುವವರು ಇರುವ ಕಾನೂನನ್ನು ಉತ್ತಮಪಡಿಸುವುದಕ್ಕೆ ತಿದ್ದುಪಡಿ ತಂದರೆ ಅದಕ್ಕೆ ನಮ್ಮ ಒಪ್ಪಿಗೆಯಿದೆ. ಇರುವ ಹಕ್ಕನ್ನು ಪೊಟಕು ಮಾಡುವುದಾದರೆ ಅದಕ್ಕೆ ಖಂಡಿತ ವಿರೋಧವಿದೆ, ಅದರ ಫಲ ಮುಂದೆ ಅವರು ನೋಡಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾದರೆ ಯಾವ ಯಾವ ತತ್ವ, ಮಾರ್ಗ ಅನುಸರಿಸಿದ್ದಾರೆಂಬುದು ಎಲ್ಲರಿಗೂ ಗೊತ್ತು. ಒಂದು ನನ್ನನಿವೇಶದಲ್ಲಿ ಒಬ್ಬರು ಒಂದು ವಿಚಾರದ ಬಗ್ಗೆ ಸುಳ್ಳು ಹೇಳಬಹುದು, ಎಲ್ಲಾ ನನ್ನನಿವೇಶಗಳಲ್ಲೂ ಎಲ್ಲಾ ವಿಚಾರಗಳ ಬಗ್ಗೆಯೂ ಹಾಗೆ ಮಾಡುವುದಕ್ಕಾಗುವುದಿಲ್ಲ. ಈಗ ಪ್ರತಿವಿಚಾರದಲ್ಲೂ ಅವರು ಅನುಸರಿಸಿರುವ ತತ್ವವನ್ನು ಅವರ ಸರ್ಕಾರವಿರುವಾಗಲೇ ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ; ಇದೇನೂ ಹೊಸದಲ್ಲ.

ಇನ್ನೊಂದು ವಿಚಾರ ಶ್ರೀ ಗೋಪಾಲ ಗೌಡರು ವಿಷಾದದಿಂದ ಹೇಳಿದ್ದಾರೆ, ಅದನ್ನು ಹೆಚ್ಚಾಗಿ ಈಗ ಹೇಳುವುದಕ್ಕಾಗುವದಿಲ್ಲ. ಹಳೆಯ ಮೈಸೂರಿನ ಆಕ್ಟನ್ನು—ಬೊಂಬಾಯಿನದು ನಾವು ನೋಡಿರಲಿಲ್ಲ, ಮಾನ್ಯ ರೆವೆನ್ಯೂ ಮಂತ್ರಿಗಳು ಬೊಂಬಾಯಿನಲ್ಲಿ ಯಾವ ಪಾತ್ರ ವಹಿಸಿದ್ದರೋ ಗೊತ್ತಿಲ್ಲ—ನಮ್ಮ ದೇಶದ ಜನರಿಗೆ ಅನ್ವಯಿಸುವ ದಾಗಿದ್ದರೆ ಸ್ವಲ್ಪಮಟ್ಟಿಗೆ ಒಪ್ಪಿಗೆಯಿತ್ತು. ಅದನ್ನು ಇತರ ಭಾಗಗಳಿಗೂ ಕೂಡ ಅನ್ವಯಿಸಬೇಕೆಂದು ನಾವು ಹೇಳುವಾಗ ಕೂಡದೆಂದು ಹಕ್ಕನ್ನು, ಅನುಕೂಲತೆಯನ್ನು ಪೊಟಕುಮಾಡುವುದು ಪ್ರತಿಗಾಮಿತತ್ವವೇ ಅಥವಾ ಪ್ರಗತಿಗಾಮಿ ತತ್ವವೇ ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕು. ಅದೂ ಅಲ್ಲದೆ ಈಗಿರುವ ಕಾನೂನು ಜಾರಿಗೆ ಬಂದಿದೆಯೆ, ಎಷ್ಟರ ಮಟ್ಟಿಗೆ ಜನರಿಗೆ ಉಪಯೋಗವಾಗಿದೆ, ಇಲ್ಲಿಯವರೆಗೆ ಸರ್ಕಾರದವರು ಯಾವ ಕಾರ್ಯಕ್ರಮ ಕೈಗೊಂಡಿದ್ದಾರೆ ಎಂಬುದಕ್ಕೆ ವಿವರಣೆ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಏಕೆಂದರೆ $\frac{1}{3}$ ಭಾಗ, $\frac{1}{4}$ ಭಾಗ ಎಂದು ಮೈದಾನಕ್ಕೇ ಬೇರೆ ಮಲೆನಾಡಿಗೇ ಬೇರೆ ಮಾಡಿದ್ದಾರೆ. ದೇಶದಲ್ಲಿ ಸರಿಯಾಗಿ ನಡೆಯುತ್ತಿದೆಯೆ, ಯಾರಿಗೆ ಈ ಕಾನೂನು ಅನ್ವಯಿಸಿದೆಯೋ ಅವರಿಗೆ ಇದರ ಫಲ ಬರುತ್ತಿದೆಯೆ, ಇಲ್ಲವೆ ಎಂದು ನಿಜವಾಗಿ ವಿಮರ್ಶೆ ಮಾಡಿಲ್ಲ ; ಇದರ ವಿಚಾರದಲ್ಲಿ ಯಾವ ನಿರ್ದಿಷ್ಟ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಇಂಥ ಮನೋಧೆಯನ್ನು ಖಂಡಿತ ವಿರೋಧಿಸಬೇಕಾಗುತ್ತದೆ ಇದು ಈ ದೇಶದ ಹಿತದೃಷ್ಟಿಯಿಂದ ತರಲ್ಪಟ್ಟಿದೆಯೆಂದು ಹೇಳಿದರೂ ತೊಂದರೆಗೆ ಕಾರಣವಾಗಿದೆ, ಜನರ ಯೋಗ ಕ್ಷೇಮ, ಹಿತಚಿಂತನೆ ಇದರಿಂದ ಕುಂಠಿತವಾಗುತ್ತದೆ. ಮುಂದೆ ಕಾಂಗ್ರೆಸ್ ಪಕ್ಷ ಇದನ್ನು ತಂದಿರುವುದರ ಫಲ ಅನುಭವಿಸಬೇಕಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The Hon'ble Member for Revenue may speak.

(*The Hon'ble Member Sri N. B. Pujar rose.*)

Mr. SPEAKER.—I call upon the Hon'ble Member Sri N. B. Pujar to make his remarks day after tomorrow, because tomorrow we will take up the voting on the Budget.

As the time is now up, the House now rises and will meet tomorrow at Twelve noon.

The House adjourned at Five of the Clock to meet again at Twelve noon on Friday, 22nd March 1957.

WD 2274—GPB—900—22-5-1957.